ಇನಾಂ ರದ್ದಿಯಾತಿ ಕಾನೂನು (ತಿದ್ದುಪಡಿ) ವಿಧೇಯಕದ ಕೆಳಗೆ ಸಂಡೂರಿಗೆ ಸೇರಿದಂತಹ ವಿಚಾರ ವಾಗಲಿ ಹಾಗೂ ಮೈಸೂರು ರಿಲೀಜಿಯಸ್ ಅಂಡ್ ಚಾರಿಟೆಬಲ್ ವಿಷಯದಲ್ಲಾಗಲೀ ಈ ರೀತಿಯಾಗಿ ಎಕ್ಸ್‌ಟೆನ್‌ಷನ್ ಮಾಡುವುದರಿಂದ ಎಷ್ಟು ಜನರಿಗೆ ಅನುಕೂಲವಾಗುತ್ತದೆ, ೨ ಸಾವಿರವೋ, ೪ ಸಾವಿರವೋ, ೪ ಸಾವಿರವೋ ಅಥವಾ ೧೦ ಸಾವಿರವೊ? ಆ ರೀತಿಯ ಅಂದಾಜು ಇದ್ದರೆ, ಆ ಏರಿಯಾದ ಜೂರಿಸ್ ಡಿಕ್ಷನ್‌ಗೆ ಬರುವಂತಹ ಅಸಿಸ್ಟೆಂಟ್ ಕಮೀಷನರ್ ಏನು ಇದ್ದಾರೆ, ಅವರು ಯಾವ ಯಾವ ಹಳ್ಳಿಗಳಲ್ಲಿ ಎಷ್ಟು ಎಷ್ಟು ಜನರನ್ನು ಗುರುತು ಮಾಡಿದ್ದಾರೆ ಎಂಬುದು ಗೊತ್ತಾಗಿದ್ದರೆ ಬೇಗೆ ಡಿಸ್‌ಪೋಸ್ ಮಾಡುವುದಕ್ಕೆ ಸಹಾಯಕವಾಗುತ್ತದೆ. ಅದನ್ನು ಬಿಟ್ಟು ಪ್ರತಿ ವರ್ಷವೂ ಈ ರೀತಿ ಎಕ್ಸ್‌ಟೆನ್ಷನ್ ಮಾಡುತ್ತಿರುವುದರಿಂದ ಪ್ರಯೋಜನ ಏನು? ಇದು ಮೂರನೆ ಸಲ ಇರಬೇಕು ಈ ರೀತಿ ಎಕ್ಸ್‌ಟೆನ್‌ಷನ್ ಮಾಡುತ್ತಿರುವುದು.

ಶ್ರೀ ಎ. ಲಕ್ಷ್ಮೀಸಾಗರ್.—ಆ ರೀತಿಯ ಸಮೀಕ್ಷೆಯನ್ನು ಮಾಡಿಲ್ಲ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಕೆಳಗೆ ೮ ಸಾವಿರ ಜನ ಅರ್ಜಿ ಹಾಕಿದ್ದಾರೆ. ಈ ವಿಚಾರದಲ್ಲಿ ಇನ್ನೂ ಆಗದೇ ಇರುವಂತಹದ್ದು. ಎಲ್ಲ ಕಡೆ ಹೋದಾಗ ಜನ ನಮ್ಮ ಹತ್ತಿರ ಬಂದು ನಾನು ಸ್ವಾಧೀನದಲ್ಲಿದ್ದೇನೆ. ಎಂಬುದಾಗಿ ಹೇಳುತ್ತಾರೆ. ಅರ್ಜಿ ಹಾಕಿದ್ದೀರ ಎಂಬುದಾಗಿ ಕೇಳಿದರೆ ಇನ್ನೂ ಹಾಕಿಲ್ಲ ಎಂಬುದಾಗಿ ಹೇಳುತ್ತಾರೆ. ಇದು ಹ್ಯೂಮನ್ ಪ್ರಾಬ್ಲಮ್.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಕರ್ನಾಟಕ ಇನಾಂ ರದ್ದಿಯಾತಿ ಕಾನೂನು (ತಿದ್ದುಪಡಿ) ವಿಧೇಯಕ ೧೯೮೭ನ್ನು ಪರ್ಯಾಲೋಚಿಸಿತು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಅಧ್ಯಕ್ಷರು.—''ಖಂಡ ೨ರಿಂದ ೫ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ರಿಂದ ೫ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಮೊದಲನೆ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—೧೯೮೭ರ ಕರ್ನಾಟಕ ಇನಾಂ ರದ್ದಿಯಾತಿ ಕಾನೂನು (ತಿದ್ದುಪಡಿ) ವಿಧೇಯಕ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''೧೯೮೭ರ ಕರ್ನಾಟಕ ಇನಾಂ ರದ್ದಿಯಾತಿ ಕಾನೂನು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

''ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ ೧೯೮೭.''

ಶ್ರೀ ಜೆ.ಹೆಚ್. ಪಟೀಲ್ (ಕೈಗಾರಿಕಾ, ವಾಣಿಜ್ಯ ಹಾಗೂ ವಿದ್ಯುತ್ ಸಚಿವರು).—ಮಾನ್ಯ ಅಧ್ಯಕ್ಷರೆ, ''೧೯೮೭ರ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.''

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಶ್ರೀ ಜೆ.ಹೆಚ್. ಪಟೀಲ್.—ಇದು ಒಂದು ಬಹಳ ಸಂಕ್ಷಿಪ್ತವಾದ ವಿಧೇಯಕ. ಇದನ್ನು ಪಾಸು ಮಾಡಬೇಕಾಗಿದೆ. ಇದರಲ್ಲಿ ಅಂತಹ ಹೆಚ್ಚಿನ ಬದಲಾವಣೆ ಏನೂ ಇಲ್ಲ. ಕಾನ್ಸ್‌ಟಿಟ್ಯೂಷನ್ ಆಫ್-ಬೋರ್ಡ್ ಮೈಸೂರು ಅಂತ ಹಿಂದೆ ಇತ್ತು. ಈಗ ಅದನ್ನು ಕರ್ನಾಟಕ ಅಂತ ಹೆಸರನ್ನು ಇಟ್ಟಿದ್ದೇವೆ. ಈ ಕಾನ್ಸ್‌ಟಿಟ್ಯೂಷನ್ ಆಫ್ ಬೋರ್ಡಿನಲ್ಲಿ ಮೊದಲು ೫ ಜನ ಸದಸ್ಯರು ಇರುತ್ತಿದ್ದರು. ಈಗ ನಮ್ಮ ಅನುಭವದ ಪ್ರಕಾರ ಇಂಡಸ್ಟ್ರಿಯಲ್ ಏರಿಯಾ ಡೆವೆಲಪ್‌ಮೆಂಟ್ ಬೋರ್ಡಿನಲ್ಲಿ ಸೈಟುಗಳನ್ನು ಅಲಾಟ್ ಮಾಡುವಾಗ ನಂತರ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುವಾಗ ಕೆಲವು ಅನುಕೂಲಗಳು ಅಶೀ ಅವಶ್ಯಕ. ಆದ್ದರಿಂದ ಇದರಲ್ಲಿ ಅವಶ್ಯಕವಾಗಿ ಬೇಕಾಗುವಂತಹ ಇಲಾಖೆಗಳ ಕಾರ್ಯದರ್ಶಿಗಳನ್ನು ಸೇರಿಸಿ ಅವರನ್ನೂ ಸದಸ್ಯರನ್ನಾಗಿ ಮಾಡಬೇಕು ಎಂಬುದಾಗಿ ಈ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಈ ಬೋರ್ಡಿನಲ್ಲಿ ಮೊದಲು ಕೈಗಾರಿಕಾ ಇಲಾಖೆಯ ಕಾರ್ಯದರ್ಶಿಯವರು, ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷರು, ಕೈಗಾರಿಕಾ ಇಲಾಖೆಯ ನಿರ್ದೇಶಕರು, ಹಾಗೂ ಇಂಡಸ್ಟ್ರಿಯಲ್ ಏರಿಯಾ ಡೆವೆಲಪ್‌ಮೆಂಟ್ ಬೋರ್ಡಿನ ಎಕ್ಸಿಕ್ಯೂಟೀವ್ ಮೆಂಬರ್ ಕೂಡ—ಇವರೆಲ್ಲರೂ ಈ ಒಂದು ಬೋರ್ಡಿನ ಸದಸ್ಯರಾಗಿದ್ದರು. ಈಗ ನಾವು ಅದನ್ನು ಬದಲಾವಣೆ ಮಾಡಿ ಈ ಕೆಳಕಂಡವರನ್ನು ಸದಸ್ಯರನ್ನಾಗಿ ಮಾಡಿದ್ದೇವೆ. ಅವರ ಹೆಸರುಗಳು ಈ ರೀತಿ ಇವೆ.—

''the Secretary to Govt., Housing and Urban Dev. Dept;

the Commissioner for Industrial Development and Director of Industries and Commerce;

the Chairman and Managing Director, Karnataka State Industrial Investment and Development Corporation Ltd;

the Chairman, Karnataka State pollution Control Board;

the Director of Town Planning;

the Managing Director, Karnata&a State Small Industries Development Corporation Limited.''

ತಮ್ಮ ನಾಮಿನೀಸ್ ಕೂಡಾ ಇರಬೇಕೆಂದು ಐ.ಡಿ.ಬಿ.ಐ.ದವರೂ ಹೇಳುತ್ತಿದ್ದರು. ಲೋನ್ ಸ್ಯಾಂಕ್ಷನ್ ಮಾಡುವುದಕ್ಕೆ ಅವರು ಇದ್ದರೆ ಬೊಂಬಾಯಿಗೆ ಹೋಗುವುದು ತಪ್ಪುತ್ತದೆ ಎಂದು ಅವರು ಹೇಳಿದರು. ಅದನ್ನು ಕಾರ್ಯಗತ ಮಾಡುವುದಕ್ಕೆ ಈ ವಿಧೇಯಕವನ್ನು ಮಂಡಿಸಿದ್ದೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿದಂತೆ ಇದು ಒಂದು ಚಿಕ್ಕದಾಗಿರತಕ್ಕ ತಿದ್ದುಪಡಿ ಮಸೂದೆ. ಹೆಸರಿನ ಬದಲಾವಣೆ ಮತ್ತು ಬೇರೆ ಬೇರೆ ಸದಸ್ಯರನ್ನು ಕೋ-ಆರ್ಡಿನೇಟ್ ಮಾಡತಕ್ಕದ್ದು ಇದೆ. ಇದನ್ನು ನಾನು ವಿರೋಧ ಮಾಡುವುದಿಲ್ಲ. ಸರ್ಕಾರದ ಕಾರ್ಯಕ್ರಮಗಳೀನಿವೆ ಅವುಗಳನ್ನು ಆದಷ್ಟು ಬೇಗ ಜಾರಿಗೆ ಕೊಡಬೇಕೆನ್ನುವ ಸದುದ್ದೇಶದಿಂದ ಮಾಡಿದ್ದೇವೆಂದು ಹೇಳಿದ್ದೀರಿ.

In the Statement of objects and Reasons, you have stated;

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಆಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

"It is proposed to provide for the Constitution of the Board on a broader basis by including different authorities connected with the Industrial Development in the State so that there can be better co-ordination, and effective implimentation of various programmes taken up by the Board".

ಈ ಮಂಡಲಿ ಏನಿದೆ ಅದು ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅದಕ್ಕೋಸ್ಕರವಾಗಿ ಈ ತಿದ್ದುಪಡಿ ಆಗಿದೆ. ದೊಡ್ಡ, ಸಣ್ಣ, ಮಧ್ಯಮ ಪ್ರಮಾಣದ ಕೈಗಾರಿಕೆಗಳನ್ನು ಬೆಳೆಸತಕ್ಕದ್ದರ ಬಗ್ಗೆ ಇಲ್ಲಿ ಬರುತ್ತದೆ. ಯಾವಾಗಲೂ ಹೆಚ್ಚು ಪ್ರಮಾಣದಲ್ಲಿ ವಿದ್ಯುತ್ ಬಳಸಿ ದೊಡ್ಡ ದೊಡ್ಡ ಕೈಗಾರಿಕೆ ಮಾಡುವುದರ ಬದಲು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಬೆಳೆಸುವ ಕಡೆಗೆ ಗಮನವನ್ನು ಹರಿಸ ಬೇಕಾಗುತ್ತದೆ. ೧೯೫೩ರಲ್ಲಿ ಹಾಗೂ ೧೯೬೫ರಲ್ಲಿ ತಮ್ಮ ಸರ್ಕಾರ ಅಧಿಕಾರಕ್ಕೆ ಬರಬೇಕಾದಾಗ ತಾವು ಏನು ಹೇಳಿದಿರಿ ? ಮಾನ್ಯ ಬೊಮ್ಮಾಯಿಯವರು ಕೈಗಾರಿಕಾ ಸಚಿವರಾಗಿದ್ದಾಗ ಈ ಸದನದಲ್ಲಿ ಹೇಳಿಕೆಯನ್ನು ಸಹಾ ಕೊಟ್ಟಿದ್ದಾರೆ. ಒಂದು ತಿಂಗಳಿಗೆ ಒಂದು ಸಾವಿರ ಕೈಗಾರಿಕೆ ಮಾಡುತ್ತೇವೆಂದು ತಾವು ಹೇಳಿದಿರಿ. ಆಗ ನಾವು ಬೊಮ್ಮಾಯಿಯವರಿಗೆ ಪ್ರಶ್ನೆಯನ್ನೂ ಮಾಡಿದ್ದೇವೆ. ಆ ರೀತಿ ಹೇಳಿಕೆ ಕೊಟ್ಟಿರುವುದು ಸಂತೋಷ. ತಿಂಗಳಿಗೆ ೧ ಸಾವಿರ ಜನರಿಗೆ ಎಂದರೆ ಎಷ್ಟು ಜನಕ್ಕೆ ಉಪಯೋಗವಾಗುತ್ತದೆ, ಒಂದು ಕುಟುಂಬದ ೪-೫ ಜನ ಸೇರಿ ಹೋಮ್ ಇಂಡಸ್ಟ್ರಿ ಮಾಡುವುದು ಇರಬಹುದು. ನಾವು ಅದರ ವಿಚಾರದಲ್ಲಿ ಆಗ ನಾವು ಅಂಕಿಅಂಶಗಳನ್ನು ಇಟ್ಟಿದ್ದೆವು. ರಾಜ್ಯದ ಜನತೆಗೆ ಚುನಾವಣೆ ಕಾಲದಲ್ಲಿ ತಿಂಗಳಿಗೆ ಒಂದು ಸಾವಿರ ಕೈಗಾರಿಕೆ ಜಾರಿಗೆ ಕೊಡುತ್ತೇವೆಂದು ಹೇಳಿದ್ದರು ಅದನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿ ನಾವು ಅಂಕಿಅಂಶಗಳನ್ನು ಇತ್ತಿದ್ದೆವು. ಆಗ ಇಲ್ಲ, ನಾವು ಮಾಡುತ್ತೇವೆ, ಪಥದಲ್ಲಿದ್ದೇವೆ ಎಂದು ಸರ್ಕಾರದ ಪರವಾಗಿ ಹೇಳಿದ್ದರು. ಇವತ್ತು ತಾವು ಕೈಗಾರಿಕಾ ಮಂತ್ರಿಗಳಾಗಿದ್ದೀರಿ. ನೀವು ಏನೋ ಸದನದ ಮುಖಾಂತರ ಅಥವಾ ಚುನಾವಣೆ ಕಾಲದಲ್ಲಿ ಹೇಳಿರಬೇಕು. ತಾವು ಹೇಳಿಬಹುದು. ಚುನಾವಣೆ ಕಾಲದಲ್ಲಿ ಹೇಳಿದ್ದು, ಅದಕ್ಕೆ ೫ ವರ್ಷ ಟೈಮ್ ಇರುತ್ತದೆ ೫ ವರ್ಷಗಳ ಕಾಲ ಇರುವುದರಿಂದ ೨ ವರ್ಷ ಕಾಲದಲ್ಲಿ ಮುಗಿಸುತ್ತೇವೆಂದು ಹೇಳಿಲ್ಲ ಎಂದು. ಇವತ್ತು ೫ ವರ್ಷಗಳಲ್ಲಿ ೫ ಸಾವಿರ ಕೈಗಾರಿಕೆ ಎಂದರೆ ಎರಡೂವರೆ ವರ್ಷದಲ್ಲಿ ಎರಡೂವರೆ ಸಾವಿರ ಕೈಗಾರಿಕೆಗಳನ್ನು ಕೊನೆಯ ಪಕ್ಷ ಮಾಡಬಹುದಲ್ಲವೇ ? ಅದನ್ನಾದರೂ ಮಾಡಿರಿ. ಐದು ವರ್ಷಗಳಲ್ಲಿ ಮಾಡತಕ್ಕ ಒಂದು ಪದ್ಧತಿ ಈ ಸರ್ಕಾರದಲ್ಲಿದೆ. ಆ ಪದ್ಧತಿಯನ್ನಾದರೂ ತಾವು ಸ್ಪಷ್ಟವಾಗಿ ಇಟ್ಟುಕೊಳ್ಳಬೇಕು. ನಿಮ್ಮ ಹೇಳಿಕೆ ಏನಿದೆ, ಒಂದು ತಿಂಗಳಿನಲ್ಲಿ ಒಂದು ಸಾವಿರ ಕೈಗಾರಿಕೆಗಳನ್ನು ಮಾಡತಕ್ಕದ್ದರಲ್ಲಿ ನೀವು ಸಂಪೂರ್ಣ ವಿಫಲರಾಗಿದ್ದೀರಿ. ನಿಮ್ಮ ಅಂಕಿಸಂಖ್ಯೆಗಳನ್ನು ನೋಡಿದರೆ ಏನು ಸಿಗುತ್ತದೆ ಅಂದರೆ ಬೋರ್ಡ್‌ಗಳನ್ನು ಮಾಡುತ್ತಿದ್ದೀರಿ. ನೀವು ಎಷ್ಟೇ ಬೋರ್ಡ್‌ಗಳನ್ನು ಮಾಡಿದರೂ ಅದರಿಂದ ಏನೂ ಉಪಯೋಗವಿಲ್ಲ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಒಂದು ತಿಂಗಳಿನಲ್ಲಿ ಒಂದು ಸಾವಿರ ಕೈಗಾರಿಕೆ ಮಾಡತಕ್ಕದ್ದು ಅದರ ಬಗ್ಗೆ ತಿದ್ದುಪಡಿ ಮಸೂದೆ ಮುಖಾಂತರ ಸದನದ ಒಪ್ಪಿಗೆಯನ್ನು ಪಡೆದು ಕರ್ನಾಟಕ ರಾಜ್ಯದ ಜನಸಾಮಾನ್ಯರಿಗೆ ಕೈಗಾರಿಕೆಗಳನ್ನು ಕೊಡತಕ್ಕದ್ದು, ಮನೆ ಮನೆಗೆ ಉದ್ಯೋಗ ಕೊಡತಕ್ಕ ಆ ಒಂದು ಕಾರ್ಯಕ್ರಮ ಆಗ ಬೇಕು. ಸರ್. ಎಂ. ವಿಶ್ವೇಶ್ವರಯ್ಯನವರು ಆ ಒಂದು ಕಲ್ಪನೆಯಲ್ಲಿ ಪಳಿಯ ಮೈಸೂರು ಭಾಗದಲ್ಲಿ ಒಂದು ದೊಡ್ಡ ವಿಚಾರಧಾರೆಯನ್ನು ಇಟ್ಟು ಅವರ ಕಾಲದಲ್ಲಿ ಆ ಒಂದು ಪ್ರಯತ್ನ ಮಾಡಿದ್ದು ತಮಗೂ ಗೊತ್ತಿದೆ. ಅಧಿಕಾರದಲ್ಲಿ ಅವರು ಕೊನೆಯವರೆಗೂ ಉಳಿಯಲಿಲ್ಲ. ರಾಜಕೀಯ ಬದಲಾವಣೆಯಿಂದ, ದೇಶಕ್ಕೆ ಸ್ವಾತಂತ್ರ್ಯ ಬಂದು ಕೆಲವೊಂದು ವ್ಯತ್ಯಾಸಗಳಾಗಿವೆ. ಆ ಕಾರ್ಯಕ್ರಮಗಳು ಅಲ್ಲಿಗೆ ನಿಂತುಹೋಗಿವೆ.

(ಶ್ರೀ ಚಂದ್ರಕಾಂತ ಬಿಲ್ಲದ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕೈಗಾರಿಕೆಗಳನ್ನು ಮಾಡಿ ತೋರಿಸುವುದು ಅಷ್ಟೇ ಅಲ್ಲ ; ನಮ್ಮಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಇರಲಿ. ದೊಡ್ಡ ದೊಡ್ಡ ಕೈಗಾರಿಕೆಗಳು ಆಗತ್ಯವಾದ ಉಪಕರಣಗಳನ್ನು ತಯಾರಿಸಿದರೆ ಅವು ನಮಗೆ ಬೇಕಾಗುತ್ತವೆ. ಮಧ್ಯಮ ತರಗತಿಯವರಿಗೆ ಕೈಗಾರಿಕೆಗಳು ಬೇಕು. ನಮ್ಮ ಚಿಂತನೆ ಗ್ರಾಮ ಮತ್ತು ಪಟ್ಟಣಗಳ ಕಡೆಗೆ ಇರಬೇಕು. ಕೈಗಾರಿಕಾ ಅಭಿವೃದ್ಧಿಯ ಕಡೆಗೆ ನಾವು ಹೆಚ್ಚು ಗಮನ ಕೊಡುವುದಾದರೆ ಹೆಚ್ಚಾಗಿ ಗೃಹ ಕೈಗಾರಿಕೆಗೆ ಗಮನ ಕೊಡಬೇಕಾಗುತ್ತದೆ. ನನ್ನ ಈ ಒಂದು ಅಭಿಪ್ರಾಯವನ್ನು ತಾವು ಕೂಡ ಒಪ್ಪುತ್ತೀರಿ. ಗೃಹ ಕೈಗಾರಿಕೆಗೆ ನಮ್ಮ ಚಿಂತನೆ ಇರಬೇಕು. ಯಾವುದೇ

ತಾಲ್ಲೂಕು ಆಗಬಹುದು, ಬರಗಾಲ ಪೀಡಿತ ಪ್ರದೇಶವಾಗಿರಲಿ ಎಲ್ಲಿಯಾದರೂ ಒಂದು ಕಡೆ ಇರಬೇಕು. ಮಂಡ್ಯ ಜಿಲ್ಲೆ ನೀರಾವರಿಯಿಂದ ಕೂಡಿದ್ದರೂ ಕೂಡ ನಾಗಮಂಗಲ ತಾಲ್ಲೂಕು ಏನಿದೆ ಅಂತಹ ಕಡೆಗಳಲ್ಲಿ ಗೃಹ ಕೈಗಾರಿಕೆಗಳು ಬರಬೇಕು. ಅದು ನಿಮ್ಮ ಕಾಲದಲ್ಲಿ ನಡೆಯುತ್ತದೆ. ನೀರಾವರಿ ಪ್ರದೇಶ ಆಗಿದ್ದರೂ ಎಲ್ಲಾ ಕಾಲದಲ್ಲಿಯೂ ನೀರು ಬರುವುದಿಲ್ಲ. ಆದು ಹೈದರಾಬಾದ್ ಕರ್ನಾಟಕ ಆಗಿರಬಹುದು, ಬಾಂಬೆ ಕರ್ನಾಟಕ ಇರಬಹುದು. ಹೈದರಾಬಾದ್ ಕರ್ನಾಟಕ ಅಂದರೆ ಮಾನ್ಯ ಖರ್ಗೆಯವರ ಏರಿಯಾ ಬಹಳ ಹಿಂದುಳಿದ ಪ್ರದೇಶವಾಗಿರುವುದರಿಂದ ಅಲ್ಲಿಗೆ ಕಾಂಗ್ರೆಸ್ ಸರ್ಕಾರವಿದ್ದಾಗ ಒಂದು ಡೆವಲಪ್ ಮೆಂಟ್ ಬೋರ್ಡ್ ರಚನೆ ಮಾಡಿತ್ತು. ತಾವು ಯಾವುದೇ ರೀತಿಯಲ್ಲಿ ಕೈಗಾರಿಕೆಗಳನ್ನು ಮಾಡಿ ಅಲ್ಲಿಯ ಜನತೆಗೆ ಉದ್ಯೋಗ ಸಿಗಬೇಕು. ಉದ್ಯೋಗಕ್ಕೆ ಒಂದು ಆಧಾರವಾಗಬೇಕು. ಅದರಿಂದ ಪರ್ ಕ್ಯಾಪಿಟಾ ಜಾಸ್ತಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಸರ್ಕಾರದ ವತಿಯಿಂದ ಇಂತಹ ಕಾರ್ಯ ಕ್ರಮಗಳನ್ನು ಮಾಡಬೇಕು. ಅಂತಹ ಕಾರ್ಯಕ್ರಮಗಳು ಯಾವುದೂ ಈಗ ಕಾಣಿಸುತ್ತಿಲ್ಲ. ಸಣ್ಣ ಕೈಗಾರಿಕೆಗಳನ್ನು ತೆಗೆದುಕೊಂಡರೆ ಕರಕುಶಲ ಕೈಗಾರಿಕೆ ಏನಿದೆ ಅದರಲ್ಲಿ ನಮ್ಮಲ್ಲಿರತಕ್ಕ ಕಚ್ಚಾವಸ್ತು ಗಳನ್ನು ಉಪಯೋಗಿಸಿಕೊಂಡು ಕೈಗಾರಿಕೆಯನ್ನು ಮಾಡಬಹುದು. ಜಪಾನ್ ದೇಶ ಪ್ರಪಂಚದ ೨ನೇ ಯುದ್ಧವಾದಾಗ ಬಾಂಬ್‌ಗಳ ಸುರಿಮಳೆಯಿಂದ ಎಲ್ಲವನ್ನು ಕಳೆದುಕೊಂಡು ಬರೀ ಬೂದಿ ಮಾತ್ರ ಉಳಿದಿತ್ತು. ಬಾಂಬ್‌ದಾಳಿಗೆ ಸಿಕ್ಕಿ ಅಲ್ಲಿ ಏನೂ ಉಳಿದಿರಲಿಲ್ಲ. ಇವತ್ತು ಅವರು ಬಹಳ ಮುಂದೆ ಬಂದಿದ್ದಾರೆ. ನೀವು ಒಂದೇ ಸಾರಿ ಮೇಲೆ ಬರುವುದಕ್ಕೆ ಸಾಧ್ಯವಿಲ್ಲ, ನಾನು ಕರ್ನಾಟಕಕ್ಕೆ ಮಾತ್ರ ಸೀಮಿತಗೊಳಿಸಿ ಮಾತನಾಡುವುದಾದರೆ, ಭಾರತ ಸರ್ಕಾರಕ್ಕೂ ಇದ್ದೂ ಸಂಬಂಧವಿಲ್ಲದೇ ಇರತಕ್ಕ ವಿಚಾರ. ಕೈಗಾರಿಕೆಗಳಿಗೆ ಹಣವನ್ನು ಎಲ್ಲಿಂದ ತರಬೇಕೆನ್ನುವುದು ತಪ್ಪಿಗೆ ಬಿಟ್ಟಿರತಕ್ಕ ವಿಚಾರ. ಒಟ್ಟಿನಲ್ಲಿ ನಮ್ಮ ಜನರಿಗೆ ಗೃಹ ಕೈಗಾರಿಕೆಗಳನ್ನು ಕೊಡದಿದ್ದರೆ ನಾವು ಜನರನ್ನು ಮುಂದೆ ತರಲಿಕ್ಕೆ ಸಾಧ್ಯವಿಲ್ಲ. ನಾವು ಮಾತೆತ್ತಿದರೆ ಆಗ್ರಿಕಲ್ಚರ್ ಎಂದು ಹೇಳುತ್ತೇವೆ. ಸುಮಾರು ಶೇಕಡಾ ೬೦-೭೦ರಷ್ಟು ವ್ಯವಸಾಯ ಆಧಾರಿತವಾಗಿ, ಆದರಲ್ಲಿ ನಂಬಿಕೆ ಇಟ್ಟುಕೊಂಡು ಜೀವನ ಮಾಡತಕ್ಕಂಥ ಸಮಾಜ ನಮ್ಮದು. ನನಗನ್ನಿಸುತ್ತದೆ ಸುಮ್ಮನೆ ವ್ಯವಸಾಯ ಅಥವಾ ಬೇಸಾಯ ಎನ್ನತಕ್ಕಂಥ ಮಾತನ್ನು ಆಡುತ್ತಿದ್ದೇವೆಯೇ ಏನಹ ಅದರ ಬದಲು ನೀರಾವರಿ ವಿಚಾರವಾಗಿ ಮಾತನಾಡಿದರೆ ನಮಗೆ ಹೆಚ್ಚಿನ ಅನುಕೂಲವಾಗ ತ್ತದೆ. ಮಾನ್ಯ ಸಭಾಧ್ಯಕ್ಷರೇ, ಯಾವ ಪ್ರಮಾಣದಲ್ಲಿ ಇದರ ಉಪಯೋಗ ಮಾಡಿಕೊಳ್ಳಬೇಕಾಗಿತ್ತೋ ಅದನ ಆಗಿಲ್ಲ. ನೀರಾವರಿ ಸಾಮರ್ಥ್ಯದ ಪೂರ್ಣ ಉಪಯೋಗವನ್ನು ನಾವು ಮಾಡಿಕೊಂಡಿಲ್ಲವೆಂದು ಹೇಳಬೇಕಾಗುತ್ತದೆ. ಇದರ ಸಂಪೂರ್ಣ ವಿವರಕ್ಕೆ ನಾನು ಈ ಸಂದರ್ಭದಲ್ಲಿ ಹೋಗುವುದಿಲ್ಲ. ಆದರೆ ಯಾರ್ಯಾರು ಕೃಷಿ ಕಾರ್ಮಿಕರು ಇದ್ದಾರೆ, ಮಳೆಯನ್ನೇ ಆವಲಂಬಿಸಿ ಕೊಂಡಿರತಕ್ಕಂಥ ವರ್ಗಕ್ಕೆ ನಾವು ಗೃಹ ಕೈಗಾರಿಕೆ ಬಗ್ಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ. ಇವತ್ತು ಸ್ವಿಜರ್‌ಲ್ಯಾಂಡ್‌ಗೆ ತಾವು ಹೋಗಿ ಬಂದಿದ್ದೀರಿ. ಅನಿವಾಸಿ ಭಾರತೀಯರು ಎಂದರೆ ನಮ್ಮ ದೇಶದಲ್ಲಿ ನೆಲೆಸದೇ ಇರತಕ್ಕಂಥವರು ಇವರನ್ನು ಭೇಟ್ಟಿಯಾಗಿದ್ದೀರಿ. ಜಪಾನ್‌ಗೂ ಹೋಗಿದ್ದೀರಿ. ಸುಮಾರಾಗಿ ತಾವು ಹೋಗುವುದಕ್ಕೆ ಮುಂಚೆ ತಮ್ಮ ಹೇಳಿಕೆ ಚೆನ್ನಾಗಿತ್ತು. ಬಂದಮೇಲೂ ಕೂಡಿ ತಾವು ಹೇಳಿದ್ದು ಬಾಯಲ್ಲಿ ನೀರೂರುವ ಹಾಗೆ ಇತ್ತು. ನಾವು ನಿರೀಕ್ಷಿಸಿದ್ದೆವು ಏನೆಂದರೆ ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಗಳು ಬಂದುಬಿಡುತ್ತವೆ ಎಂದು, ಅನಿವಾಸಿ ಭಾರತೀಯರಿಂದ ಹಣ ತೊಡಗಿಸುವ ಬಗ್ಗೆ ತಾವು ಪ್ರಾಮಾಣಿಕ ಪ್ರಯತ್ನ ಮಾಡಿರಬಹುದು. ಇಲ್ಲವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇದರಿಂದ ಸಾಫಲ್ಯ ಏಷ್ಟಾಯಿತು ? ಎಷ್ಟು ಪ್ರಮಾಣದ್ದು ಆಯಿತು ? ಎಷ್ಟು ಹಣ ತೆಗೆದುಕೊಂಡು ಬಂದಿರಿ ? ಎಷ್ಟು ಜನ, ಎಷ್ಟು ಹಣ ? ಶೇಕಡಾವಾರು ಎಷ್ಟು ಪ್ರಯೋಜನ ಆಗಿದೆ ? ಏನಾದರೂ ಚಾನ್ಸ್ ಇದ್ದರೆ ಸಂತೋಷ. ಮೊದಲೇ ನಿರ್ಧಾರ ಮಾಡಿ ತರತಕ್ಕಂಥ ಪ್ರಯತ್ನ ಮಾಡಿದ್ದೀರಾ ? ಈ ವಿಚಾರವನ್ನು ತಾವು ಈ ಸದನದ ಮುಂಖಾತರ ಕರ್ನಾಟಕ ರಾಜ್ಯದ ಜನತೆಗೆ ಹೇಳಿದರೆ, ನಿಜವಾಗಿಯೂ ಶ್ರೀ ಜೆ. ಹೆಚ್. ಪಟೇಲರು ಪ್ರವಾಸ ಹೋಗಿಬಂದು ಹಣತೆಗೆದು ಕೊಂಡು ಬಂದು ಬಂಡವಾಳ ಹೂಡಿಸಿದ್ದಾರೆ ಎಂದು ತಿಳಿಯುತ್ತದೆ: ಈ ಹಣದಿಂದ ಕಾರ್ಖಾನೆಗಳನ್ನು ಶುರುಮಾಡಿ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥವರು ಅಥವಾ ಸಣ್ಣಪಟ್ಟಣ ಪ್ರದೇಶದಲ್ಲಿ ಇರ ತಕ್ಕಂಥವರು ಇದರ ಪ್ರಯೋಜನ ಪಡೆದು, ತನ್ಮೂಲಕ ಪರ್ ಕ್ಯಾಪಿಟಾ ಇನ್‌ಕಮ್ ಹೆಚ್ಚು ಮಾಡು ವುದಕ್ಕೋಸ್ಕರ ಮತ್ತು ಗ್ರಾಮೀಣ ಜನತೆಯ ಅಭಿವೃದ್ಧಿಗೋಸ್ಕರ ಗಮನಹರಿಸತಕ್ಕಂಥ ವಿಚಾರ ಧಾರೆ ಇಲ್ಲಿ ಕ್ರೋಢೀಕೃತವಾಗಿ ಇಲ್ಲಿ ಅದರ ಸ್ಪಷ್ಟ ರೂಪ ಪಡೆದಿದೆಯೆಂಬ ಚಿಂತನೆಗೆ ಬರೋಣ. ಇದರ ಬಗ್ಗೆ ವಿವರಗಳನ್ನು ಅವರು ಕೊಡಬೇಕು. ಎಲ್ಲಾ ವಿವರಗಳು ಒಂದೇ ಸಲಕ್ಕೆ ಅವರ ಹತ್ತಿರ ಇದೆಯೋ ಇಲ್ಲವೋ ಗೊತ್ತಿಲ್ಲ. ಇಲ್ಲದಿದ್ದರೆ ಕಾಲಾವಕಾಶ ತೆಗೆದುಕೊಳ್ಳಲಿ. ನಾನು ಬೇಡವೆಂದು ಹೇಳುವುದಿಲ್ಲ. ವಿವರಗಳನ್ನು ಸದನದ ಗಮನಕ್ಕೆ ತಂದರೆ ಬಹಳ ಒಳ್ಳೆಯದು. ಅಧ್ಯಕ್ಷರೇ, ಒಂದು ಮಾತ್ರ ನಿಜ. ಸುಮಾರಾಗಿ ವ್ಯವಸಾಯ ಆಧಾರಿತವಾದ ನಮ್ಮ ಸಮಾಜಕ್ಕೆ ಗೃಹಕೈಗಾರಿಕೆಗಳು

ಬೇಕು. ನಾಳೆ ನಮ್ಮ ಸರ್ಕಾರ, ಬರಬಹುದು ಅಥವಾ ಮತ್ತೊಂದು ಪಕ್ಷದ ಸರ್ಕಾರ ಬರಬಹುದು. ಆದರೆ ಮೊದಲು ಜನತೆಗೆ ಉದ್ಯೋಗವನ್ನು ಕೊಡತಕ್ಕಂಥಾದ್ದು ತನ್ಮೂಲಕ ಆರ್ಥಿಕಾಭಿವೃದ್ಧಿಗೆ, ಹೆಚ್ಚು ಗಮನ ಕೊಡುವುದಕೋಸ್ಕರ ಈ ಬಂಡವಾಳವನ್ನು ಹೆಚ್ಚು ಹೊಡಿಸಿಕೊಳ್ಳುವ ಬಗ್ಗೆ ಹೆಚ್ಚಿನ ಗಮನ ಹರಿಸಬೇಕಾಗಿದೆ. ನಮ್ಮಲ್ಲಿ ಭತ್ತದ ಹುಲ್ಲು ಇದೆ. ಕರೆಡ ಎನ್ನುವ ಭತ್ತದ ಹುಲ್ಲಿನಿಂದ ಏನೇನು ತಯಾರು ಮಾಡಬಹುದು ? ಒಬ್ಬರು ಸಿಮೆಂಟು ತಯಾರು ಮಾಡಬಹುದು ಎಂದರು, ಕೆಲವರು ಕಾಗದ ತಯಾರು ಮಾಡುತ್ತೇವೆ ಎಂದು ಹೇಳಿದರು. ಹಾಗೆಯೇ ಮಣ್ಣು ಪೆಟ್ಟಿಗೆಯಲ್ಲಿ ಸಿಗುತ್ತದೆ. ಇದರಿಂದ ಏನು ಉಪಯೋಗ ? ಇದೇ ಮಣ್ಣು ಮತ್ತೊಬ್ಬರ ಕೈಗೆ ಸಿಕ್ಕರೆ ಬೇಕಾದ ಹಾಗೆ ಉಪಯೋಗ ಮಾಡುತ್ತಾರೆ. ಉದಾಹರಣೆಗೆ ನಮ್ಮಲ್ಲಿ ಸಿಗುವ ಕಬ್ಬಿಣದ ಅದಿರನ್ನೇ ತೆಗೆದು ಕೊಳ್ಳಿ. ನಮ್ಮಲ್ಲಿಂದ ಕಬ್ಬಿಣದ ಅದಿರನ್ನು ತೆಗೆದುಕೊಂಡು ಹೋಗಿ ಜಪಾನ್ ದೇಶದವರು ಯಾವ ಮಟ್ಟವನ್ನು ಮುಟ್ಟಿದ್ದಾರೆ ಎಂದು ನೋಡಿ ಯೋಚನೆ ಮಾಡಬೇಕು. They do not exactly produce or get iron ore in their country as per their requirement. ಇದು ಜಪಾನ್‌ನಲ್ಲಿಯೂ ಸಿಕ್ಕುವುದಿಲ್ಲ. ನಮ್ಮ ಕರ್ನಾಟಕದಲ್ಲಿ ಈಗ ಕುದುರೆಮುಖ ಕಬ್ಬಿಣದ ಅದಿರು ಸಿಕ್ಕುತ್ತಿದೆ. ಮಾನ್ಯ ಸಭಾಧ್ಯಕ್ಷರೇ, ಇಲ್ಲಿರತಕ್ಕಂಥ ಪ್ರಶ್ನೆ, ನಮ್ಮಲ್ಲಿರತಕ್ಕಂಥ ಕಚ್ಚಾವಸ್ತುಗಳು ಕಬ್ಬಿಣದ ವಸ್ತುಗಳು ಇರಬಹುದು, ಅಥವಾ ಬೇರೆ ಯಾವುದೇ ವಸ್ತುಗಳು ಇರಬಹುದು ಇವೆಲ್ಲವೂ ನಮ್ಮ ಕಣ್ಣಿಗೆದುರಿಗೆ ಹಾಳಾಗಿ ಹೋಗುತ್ತಿವೆ. ಇವನ್ನು ಉಪಯೋಗ ಮಾಡತಕ್ಕಂಥ ವಿಚಾರಧಾರೆ ಇಲ್ಲದೇ ಹೋದರೆ, ಬಹಳ ಕಷ್ಟವಾಗುತ್ತದೆ. ಈ ಕಚ್ಚಾ ವಸ್ತುಗಳು ಒಬ್ಬ ಕಲಾವಿದನಿಗೆ ಸಿಕ್ಕಿದರೆ, ಸುಂದರವಾದ ಮೂರ್ತಿ ಮಾಡುತ್ತಾನೆ. ಅದೇ ಮತ್ತೊಬ್ಬರಿಗೆ ಸಿಕ್ಕಿದರೆ ಗೊಬ್ಬರದ ಗುಂಡಿಗೆ ಹೋಗುತ್ತವೆ. ಜನಸಾಮಾನ್ಯರ ಜೀವನ ದೃಷ್ಟಿಯಲ್ಲಿ, ಗೃಹಕೈಗಾರಿಕೆಯ ಬಗ್ಗೆ ತಾವು ಏನು ಗಮನ ಕೊಟ್ಟಿದ್ದೀರಿ, ನನಗೆ ಈ ಸಂದರ್ಭದಲ್ಲಿ ಯೋಜನೆಗೆ ಬಂದ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಉಳಿದ ವಿಚಾರಗಳಿಗೆ ನಾನು ಈಗ ಹೋಗುವುದಿಲ್ಲ. ತಮ್ಮ ಉತ್ತರದಲ್ಲಿ ನಮಗೆ ಒಂದೆರಡಕ್ಕೆ ಸಾಕಷ್ಟು ಉತ್ತರ ಕೊಡಬಹುದು. ನೀವು ಈಗ ಇಂತಹ ಬೋರ್ಡ್ ಮಾಡುವುದರಿಂದ ಏನು ಉಪಯೋಗ ? ಸದನದ ಕಾಲ ವ್ಯರ್ಥ. ಉದ್ಯೋಗಾಧಾರಿತ ಕೈಗಾರಿಕೆಗಳು ಬರದೇ ಹೋದರೆ ಇದರಿಂದ ಏನು ಉಪಯೋಗವೆಂದು ಹೇಳುತ್ತಾ, ಈವರೆಗೆ ಕಾಲಾವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ.ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ. ಈ ಒಂದು ತಿದ್ದುಪಡಿ ವಿಧೇಯಕದ ಬಗ್ಗೆ ವಿಶೇಷವಾಗಿ ನಾನು ಏನನ್ನೂ ಪ್ರಸ್ತಾಪ ಮಾಡುವುದಕ್ಕೆ ಬಯಸುವುದಿಲ್ಲ. ಒಂದೇ ಒಂದು ವಿಚಾರವನ್ನು ಮಂತ್ರಿಗಳಲ್ಲಿ, ಈ ಸಂದರ್ಭದಲ್ಲಿ ವಿನಂತಿರೂಪದಲ್ಲಿ ಹೇಳಲಿಕ್ಕೆ ಬಯಸುತ್ತೇನೆ.

ನಾವು ಈ ಮಂಡಲಿಗಳನ್ನು ಮಾಡುತ್ತಾ ಹೋಗಿದ್ದೇವೆ. ಅವರ ಉದ್ದೇಶ ಈ ಮಂಡಲಿಗಳು ಒಂದು ಮಾಸಗೀ ಉದ್ಯಮಮಂಡಲಿರತಕ್ಕಂಥ, ಏನು ಒಂದು ಸ್ವಾತಂತ್ರ್ಯ ಇದೆ ಏನು ಉಪಕ್ರಮ ಸ್ವಭಾವ ಅಥವಾ ಶಕ್ತಿ ಇದೆ, ಅದು ಇರಬೇಕು ಎಂದು ಮಾಡಿದ್ದು ಸಾರ್ವಜನಿಕ ಇಲಾಖೆ ಒಂದು ಹೊಣೆಗಾರಿಕೆ ಅಥವಾ ಜವಾಬ್ದಾರಿ, ಇದೂ ಕೂಡ ಸಮನ್ವಯ ಆಗಬೇಕು. ಬೇರೆ ಒಂದು ಇಲಾಖೆ ಎಂದು ಇದ್ದರೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಒಂದು ಪ್ರಮಾಣದ ಸ್ವಾಯತ್ತತೆಯನ್ನು ಕೊಟ್ಟು ಕೆಲಸ ಮಾಡಬೇಕು ಎಂದು ಹಿಂದೆ ಒಂದು ತತ್ವ ಇತ್ತು. ಆ ತತ್ವ ಹೇಗೆ ಆಡ್ಮಿನಿಸ್ಟ್ರೇಷನ್ ಆಗುತ್ತಿದೆ ಎಂದರೆ ತಿರುಗು ಮುರುಗು ಆಗುತ್ತಿದೆ. ಎರಡು ಕೋನಗಳು ಸಮನ್ವಯ ಆಗುವುದರ ಬದಲು, ಅವರ ದೋಷಗಳ ಜೋಡಣೆ ಆಗುತ್ತಿದೆ ಎಂಬುದನ್ನು ಹಲವಾರು ಸಾರಿ ಪ್ರಸ್ತಾಪ ಮಾಡಿದ್ದೇನೆ. ಸ್ವಾಮಿ ಒಮ್ಮೆ ಬರ್ನಾರ್ಡ್‌ಷಾ ಅವರ ಕಛೇರಿಗೆ ಹೋಗಿದ್ದೇನೆ. ಇನ್ನೊಮ್ಮೆ ಹೇಳಿದರೂ ಕೂಡ ಹೆಚ್ಚಾಗುವುದಿಲ್ಲ. ಬರ್ನಾರ್ಡ್‌ಷಾ ಅವರ ಹತ್ತಿರ ಒಬ್ಬ ಸಿನಿಮಾ ತಾರೆ ಬಂದು ನಾನು ನಿಮ್ಮನ್ನು ಮದುವೆಯಾಗುತ್ತೇನೆಂದು ಹೇಳಿದಳು ಏತಕ್ಕೆ ನನ್ನನ್ನು ಮದುವೆಯಾಗುತ್ತೀಯೆಂದು ಕೇಳಿದಾಗ, ನಿಮ್ಮಂಥ ಬುದ್ಧಿವಂತರು, ನನ್ನಂಥ ಸುಂದರವಾದ ಹೆಂಗಸು, ಇಬ್ಬರೂ ಮದುವೆಯಾದರೆ, ನಿಮ್ಮಂಥ ಬುದ್ಧಿ ಇರುವ, ನನ್ನಂಥ ಸುಂದರವಾದ ಮಗು ಹುಟ್ಟುತ್ತದೆ, ಆದ್ದರಿಂದ ಮದುವೆಯಾಗುತ್ತೇನೆಂದು ಹೇಳಿದಳು. ಆಗ ಬರ್ನಾರ್ಡ್‌ಷಾ ಅವರು ಆ ತರಹ ಆಗದೇ ನನ್ನಂಥ ರೂಪ, ನಿನ್ನ ಗುಣ ಇರುವಂಥ ಮಗು ಹುಟ್ಟಿದರೆ ಏನಾಗಬಹುದು ಆದ್ದರಿಂದ ಕಷ್ಟವಾಗುತ್ತದೆಂದು ಹೇಳಿದರು. ಆ ರೀತಿ ಈ ಮಂಡಲಿಗಳು ಏನಾಗಿವೆ ಎಂದರೆ, ಸಾರ್ವಜನಿಕ ಇಲಾಖೆಯ ಹೊಣೆಗಾರಿಕೆಯೂ ಇಲ್ಲ, ಈ ಕಡೆ

---

† ಈ ಚಿಹ್ನೆಯು ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಖಾಸಗಿ ಉದ್ಯಮದಲ್ಲಿರತಕ್ಕಂಥ ಸ್ವಾತಂತ್ರ್ಯ ಮತ್ತು ಉಪಕ್ರಮ ಶಕ್ತಿಯೂ ಇಲ್ಲದಿರುವುದನ್ನು ನಾವು ನೋಡುತ್ತಿದ್ದೇವೆ. ನೀವು ಇದನ್ನು ವಿಸ್ತರಿಸುತ್ತಿದ್ದೀರಿ. ಡೈರೆಕ್ಟರ್ ಆಫ್ ಟೌನ್ ಪ್ಲಾನಿಂಗ್, ಕರ್ನಾಟಕ ಸ್ಟೇಟ್ ಪಲ್ಯೂಷನ್ ಕಂಟ್ರೋಲ್ ಬೋರ್ಡ್‌ನವರು ಇವರನ್ನೆಲ್ಲಾ ಸೇರಿಸಿದ್ದೀರಿ. ನಾನು ಕೇಳುತ್ತಿರುವುದು ಒಂದು, ಇವರನ್ನೆಲ್ಲಾ ಸೇರಿಸಿ ಇಲ್ಲಿ ಕೆಲವು ವಿಚಾರಗಳು ಚರ್ಚೆಯಾಗಿ ತೀರ್ಮಾನ ಆದ ಮೇಲೆ ಅದು ಅಂತಿಮವಾದ ತೀರ್ಮಾನ ಆಗಬೇಕು. ಅದು ಅಂತಿಮ ಆಗಬೇಕು ಈಗ ಏನಾಗುತ್ತಿದೆ ಎಂದರೆ, ನನ್ನ ಅನುಭವದಲ್ಲಿ ನಾನು ಸರಕಾರದಲ್ಲಿದ್ದು ನಡೆದಿರತಕ್ಕಂಥ ಅನುಭವವನ್ನು ಹೇಳುವುದಾದರೆ, ಇವರೆಲ್ಲರೂ ಈ ಸಮಿತಿಯಲ್ಲಿಇರುವಂತೆ ಇರುತ್ತಾರೆ, ಬೋರ್ಡ್‌ನಲ್ಲಿ ಹಾಗೆ ಪ್ರತಿಯೊಂದರಲ್ಲೂ ಇವರು ಇರುತ್ತಾರೆ. ಎಷ್ಟೋ ಸಾರಿ ಅಲ್ಲಿಯ ಸಭೆಗಳಲ್ಲಿಇವರು ಭಾಗವಹಿಸುವುದೇ ಇಲ್ಲ ಹೆಸರಿಗೆ ಪ್ರತಿಯೊಬ್ಬರೂ ಇರಲೇಬೇಕು ಇವರೇ ಇದರ ಬಗ್ಗೆ ತಿದ್ದುಪಡಿ ಸೂಚನೆ ಮಾಡಿರುತ್ತಾರೆ. ಇವರು ಹೆಸರಿಗೆ ಅಲ್ಲಿರುವಂತೆ ಇರುತ್ತಾರೆ ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದಿಲ್ಲ. ಹಾಗೆ ಭಾಗವಹಿಸಿದ್ದರೂ ಕೂಡ ಸುಮ್ಮನೆ ಕುಳಿತುಕೊಂಡಿರುತ್ತಾರೆ. ನಿರ್ಣಯ ಆಗುವವರೆಗೆ ಸುಮ್ಮನೆ ಕುಳಿತುಕೊಂಡು, ಹೊಸದಾಗಿ ಈ ವಿಚಾರ ಇಲಾಖೆಗೆ ಬಂದ ಮೇಲೆ, ಈ ವಿಚಾರ ಇಲಾಖೆಯಲ್ಲಿ ಪ್ರೊಸೆಸ್ ಆಗಬೇಕು, ಅಲ್ಲಲ್ಲಿ ಇದು ಪರಿಷ್ಕಾರ ಗೊಳ್ಳಬೇಕು. ಎಷ್ಟೋ ಸಾರಿ ಇವರೇ ಆ ಬೋರ್ಡ್‌ನಲ್ಲಿ ಕುಳಿತುಕೊಂಡು, ಅಲ್ಲಿ ಆದಂಥ ತೀರ್ಮಾನಕ್ಕೆ ಇವರು ಭಾಗಿಗಳಾಗಿದ್ದರೂ ಕೂಡ ಇಂತಹ ಕಾರಣಕ್ಕಾಗಿ ಇದನ್ನು ಒಪ್ಪುವುದಕ್ಕೆ ಆಗುವುದಿಲ್ಲ ಎಂದು ಪಾಪಸ್ಸು ಕಳಿಹಿಸಿರತಕ್ಕದ್ದನ್ನು ನಾನು ಹಲವಾರು ಸಂದರ್ಭಗಳಲ್ಲಿ ಗಮನಿಸಿದ್ದೇನೆ. ಈ ರೀತಿಯಾದರೆ ಬೋರ್ಡ್‌ನಲ್ಲಿ ಆದ ತೀರ್ಮಾನ ವ್ಯರ್ಥ. ಇವರನ್ನೆಲ್ಲಾ ಕೂರಿಸಿಕೊಂಡು ತೀರ್ಮಾನ ಮಾಡುವುದು, ಆದೇ ತೀರ್ಮಾನವನ್ನು ಹೊಸದಾಗಿ ಪ್ರತಿಯೊಂದು ಇಲಾಖೆಗೂ ಕಳುಹಿಸುವುದು ಇದು ಪ್ರತಿಯೊಂದು ಇಲಾಖೆಗೂ ಹೊಸ ಪರಿಷ್ಕರಣಕ್ಕೆ ಒಳಪಟ್ಟು ಈ ತೀರ್ಮಾನ ಯಾವುದೇ ರೀತಿಯಲ್ಲೂ ಕಾರ್ಯಗತ ಆಗದೇ ಇರುವ ಪರಿಸ್ಥಿತಿ ಹೋಗಬೇಕು. ಯಾರು ಯಾರು ಇದರ ಒಳಗೆ ಇರುತ್ತಾರೆ, ಆ ಇಲಾಖೆಗಳಿಗೆ ಈ ತೀರ್ಮಾನದ ಬಗ್ಗೆ ಮತ್ತೊಮ್ಮೆ ಅಧಿಕಾರ ಇರಕೂಡದು. ಈ ತೀರ್ಮಾನ ಎಲ್ಲಾ ಅಧಿಕಾರಿಗಳೂ ಸೇರಿ ಮಾಡಿರತಕ್ಕ ತೀರ್ಮಾನ ಎನ್ನುವುದು ಅದು ಕಾರ್ಯಗತ ವಾದರೆ ಮತ್ತು ಪುನರ್ಣಿ ಪಡೆದರೆ ಮಾತ್ರ ಆದಕ್ಕೆ ಸಾರ್ಥಕತೆ ಇದೆ, ಇಲ್ಲದೇ ಹೋದರೆ ಸಾರ್ಥಕ ವಾಗುವುದಿಲ್ಲ ಎಂದು ಒತ್ತಾಯಪೂರ್ವಕವಾಗಿ ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿ, ನನ್ನ ಎರಡು ಮಾತು ಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಮಾತನಾಡುತ್ತಾ ಇದೇನೂ ಅಷ್ಟು ದೊಡ್ಡ ವಿಷಯವಲ್ಲ, ಸಣ್ಣ ವಿಷಯ, ಈಗ ಇರುವಂತಹ ನಂಬರ್ ಮಾತ್ರ ಚಾಸ್ತಿ ಮಾಡುತ್ತೇವೆ, ಬೇರೆ ಅಧಿಕಾರಿಗಳನ್ನು ಸೇರಿಸುವುದಿಲ್ಲವೆ ಎಂದು ಪ್ರಶ್ನೆ ನಾಡಿದರು. ಇದರ ಬಗ್ಗೆ ಕೆಲವು ಅಂಶಗಳನ್ನು ಮಾನ್ಯ ಬಂಗಾರಪ್ಪನವರು ಮಾತನಾಡಿರುವುದರಿಂದ, ನಾನು ಅದನ್ನು ಪುನರುಚ್ಚರಿಸುವುದಕ್ಕೆ ಹೋಗುವುದಿಲ್ಲ. ನನ್ನ ಮನಸ್ಸಿನಲ್ಲಿ ಇದ್ದದ್ದೂ ಅದೇ. ಇದು ಸಮಗ್ರವಾಗಿ ಯೋಚನೆ ಮಾಡಿ ಮಾಡುವಂತಹ ತೀರ್ಮಾನವಾದರೆ ಒಳ್ಳೆಯದು, ಅರ್ಧಂಬರ್ಧ ಮಾಡುವುದು ಸರಿಯಾದುದು ಅಲ್ಲ ಎಂದು ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ಕೈಗಾರಿಕಾ ಬೆಳವಣಿಗೆ ಯಾಗಬೇಕೆಂದು ಎಲ್ಲರಿಗೂ ಅಭಿಪ್ರಾಯ ಇದೆ. ಕೈಗಾರಿಕಾ ಬೆಳವಣಿಗೆ ಯಾಗಬೇಕಾದರೆ ಅದು ಯಾವ ದಾರಿಯಲ್ಲಿ ಬೆಳವಣಿಗೆಯಾಗಬೇಕು, ಅದರ ಬಗ್ಗೆ ಯಾವ ದೃಷ್ಟಿಕೋನ ಇರಬೇಕು ಯಾವ ಧೋರಣೆ ಇರಬೇಕು ಎಂಬುದು ಮುಖ್ಯವಾದ ಅಂಶ. ಇದರ ಬಗ್ಗೆ ನಾನು ಹಿಂದಿನ ಅಧಿವೇಶನದಲ್ಲಿ ಮಾತನಾಡಿದ್ದೇನೆ, ನನ್ನ ಅಭಿಪ್ರಾಯಗಳನ್ನು ತಿಳಿಸಿದ್ದೇನೆ. ಈ ಸರಕಾರ ಬಂದಮೇಲೆ ಕೇಂದ್ರ ಸರಕಾರದ ಮೂಲಭೂತ ಕೈಗಾರಿಕಾ ನೀತಿ ಏನಿದೆ ಅದನ್ನು ಬಿಟ್ಟು ತಮ್ಮದೇ ಆದಂಥ ನೀತಿಯನ್ನು ಅನುಸರಿಸುತ್ತಿದ್ದಾರೆ. ಹಿಂದೆ ಕೇಂದ್ರದಲ್ಲಿ ಜನತಾ ಪಕ್ಷದ ಸರಕಾರ ಇದ್ದಾಗ ಯಾವ ನೀತಿಯನ್ನು ಅನುಸರಿಸುತ್ತಿತ್ತು ಆ ನೀತಿಯನ್ನು ಅನುಸರಿಸುವುದಕ್ಕೆ ಹೋಗುತ್ತಿದ್ದೀರಿ. ಆ ನೀತಿಯನ್ನು ಅನುಸರಿಸಿ ಅವರು ಎಡವಿದ್ದರು. ಈಗ ಇವರೂ ಕೂಡಾ ಎಡವುತ್ತಾರೆ ಎಂದು ಕಳೆದ ವರ್ಷದ ಭಾಷಣದಲ್ಲಿ ನಾನು ಹೇಳಿದ್ದೇನೆ. ಅದನ್ನು ವಿಶ್ಲೇಷಣೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಇದರ ಬಗ್ಗೆ ಕಳೆದ ವರ್ಷ ದೀರ್ಘವಾಗಿ ವಿಶ್ಲೇಷಣೆ ಮಾಡಿದ್ದೇನೆ. ೧೯೫೭ರ ಕೈಗಾರಿಕಾ ರೆಸಲ್ಯೂಷನ್ ಏನಿತ್ತು, ಆದರಲ್ಲಿ ಏನಿದೆ, ನಂತರ ೧೯೮೦ ರಲ್ಲಿ ಏನು ಆಯಿತು, ಇದಕ್ಕೆ ಮುಂಚೆ ಜನತಾ ಪಕ್ಷದ ಸರಕಾರ ಬಂದಾಗ ಏನು ಆಯಿತು, ಅದು ಮಾಡಿದ ನಿರ್ಣಯ ಏನಾಗಿದೆ ಇದರ ಬಗ್ಗೆ ನಾನು ಬಹಳ ದೀರ್ಘವಾಗಿ ಮಾತನಾಡಿದ್ದೇನೆ. ಇವತ್ತಿನ ದಿವಸ ನಾನಾ ಅಭಿಪ್ರಾಯಗಳಿವೆ. ಮೂಲಭೂತವಾಗಿ ದೊಡ್ಡದೊಡ್ಡ ಕೈಗಾರಿಕೆಗಳು ಬರಬೇಕು, ಮಧ್ಯಮರ್ತಿ ಕೈಗಾರಿಕೆಗಳು ಬರಬೇಕು, ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಬರಬೇಕು, ಈ ರೀತಿಯ ಅಭಿಪ್ರಾಯಗಳು ಏನಿದೆ, ಇವುಗಳಲ್ಲಿ ಯಾವುದಕ್ಕೆ ಆದ್ಯತೆ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕೊಡಬೇಕು, ಎಂಬುದು ಬಹಳ ಮುಖ್ಯವಾದ ವಿಷಯ. ಆದನ್ನು ಬಿಟ್ಟು ಸ್ವೇಚ್ಛೆಯಾಗಿ ಯೋಚನೆ ಮಾಡಿ, ಸಣ್ಣ ಸಣ್ಣ ಕೈಗಾರಿಕೆಗಳು ಬರಬೇಕು, ಗುಡಿಕೈಗಾರಿಕೆಗಳನ್ನು ಮಾಡುತ್ತೇವೆ. ಒಂದು ಸಾವಿರ ಕೈಗಾರಿಕೆ ಮಾಡುತ್ತೇವೆ, ಬೆಂಕಿಪೊಟ್ಟಣದ ಕೈಗಾರಿಗೆ ಮಾಡುತ್ತೇವೆ, ಮತ್ತು ಸಾಬೂನು ಕೈಗಾರಿಕೆ ಮಾಡುತ್ತೇವೆ, ಎಂದು ಹೇಳಿ ಲೋಪ ಇರುವಂತಹ ಕೈಗಾರಿಕಾ ನೀತಿಯನ್ನು ತೆಗೆದುಕೊಂಡು ಬಂದರೆ ಅದು ಯಾವುದೂ ನಡೆಯುವುದಿಲ್ಲ ಎಂದು ನಾನು ಹೇಳಿದ್ದೆ. ಒಂದು ಸಾವಿರ ಕೈಗಾರಿಕೆ ಇರಲಿ, ಇಂದು ಕೆಲವು ಕೈಗಾರಿಕೆಗಳು ಸಹ ಬಂದಿಲ್ಲ. ನಮ್ಮ ಮಾನ್ಯ ಮಿತ್ರರು ಹೇಳಿದಹಾಗೆ ಇದರಲ್ಲಿ ಸರಕಾರದವರು ಪೂರ್ತಿಯಾಗಿ ವಿಫಲರಾಗಿದ್ದಾರೆ. ಅಥವಾ ಆರೀತಿ ತಕ್ಷಣ ಅದನ್ನು ತೆಗೆದುಕೊಂಡು ಬಂದಿದ್ದರೂ ಸಹ ಅದು ವಿಫಲವಾಗುತ್ತಿತ್ತು. ಇವತ್ತಿನ ದಿವಸ ನಮ್ಮ ಸಮಾಜದೊಳಗೆ ಇರುವ ದೊಡ್ಡ ದೊಡ್ಡ ಬಂಡವಾಳಶಾಹಿಗಳು, ಮತ್ತು ಗುತ್ತಿಗೆದಾರರು ಇರುವ ಸಮಾಜದೊಳಗೆ ಮಾರ್ಗ ಸೀಮಿತವಾಗಿರುತ್ತದೆ. ದೊಡ್ಡ ದೊಡ್ಡ ಗುತ್ತಿಗೆದಾರರು, ಬಂಡವಾಳಗಾರರು, ಇವತ್ತು ಟ್ರಾಯ್ಲೆಟ್ ಸೋಪುಗಳನ್ನು ತಯಾರು ಮಾಡುತ್ತಿದ್ದಾರೆ. ಬೇರೆ ಸೋಪುಗಳನ್ನು ತಯಾರು ಮಾಡುತ್ತಿದ್ದಾರೆ, ಟೂಥ್ ಪೇಸ್ಟ್‌ಗಳನ್ನು ತಯಾರು ಮಾಡುತ್ತಿದ್ದಾರೆ. ನೀವು ಗುಡಿ ಕೈಗಾರಿಕೆಗಳಲ್ಲಿ ಇವುಗಳನ್ನು ತಯಾರು ಮಾಡಿದರೆ ಅದನ್ನು ಮಾರಾಟ ಮಾಡುವವರು ಯಾರು, ಸೇಲ್ಸ್ ಮೆಕಾನಿಸಮ್ ಏನು ಈ ರೀತಿ ಕೈಗಾರಿಕೆ ಪ್ರಾರಂಭ ಮಾಡಿದ್ದರೂ ಸಹ ಅವೆಲ್ಲಾ ಮುಚ್ಚಿಕೊಂಡು ಹರಾಜಾಗುತ್ತಿತ್ತು. ಈಗ ಮಾಡಿಲ್ಲ, ಆದುದರಿಂದ ಮುಚ್ಚಿಕೊಂಡು ಹೋಗುವ ಪ್ರಶ್ನೆ ಬರುವುದಿಲ್ಲ, ಇರುವ ನಿರುದ್ಯೋಗಿಗಳೇ ಸಾಕು ಇನ್ನಷ್ಟು ನಿರುದ್ಯೋಗಿಗಳು ಆಗಿಲ್ಲ ಆದುದರಿಂದ ನಮ್ಮ ದೇಶದಲ್ಲಿ ಯಾವ ಕೈಗಾರಿಕಾ ಧೋರಣೆ ಒಳ್ಳೆಯ ಧೋರಣೆ ಎಂದು ಒಪ್ಪಿಕೊಂಡು ಬಂದಿದ್ದೇವೆಯೋ ಅದನ್ನು ಇನ್ನೂ ಸ್ವಲ್ಪ ಆಳವಾಗಿ ಯೋಚನೆ ಮಾಡಿ, ಜಾರಿಗೆ ತೆಗೆದುಕೊಂಡು ಬನ್ನಿ ಎಂದು ಹೇಳಬೇಕಾಗಿದೆ. ಕೈಗಾರಿಕಾ ಇಲಾಖೆಯ ಬೇಡಿಕೆಗಳು ಬಂದಾಗ ನಾನು ಇನ್ನೂ ಹೆಚ್ಚು ದೀರ್ಘವಾಗಿ ಮಾತನಾಡುವುದಕ್ಕೆ ಅವಕಾಶ ಇದೆ. ಆದುದರಿಂದ ಈಗ ವಿಶ್ಲೇಷಣೆ ಮಾಡುವುದಕ್ಕೆ ಹೋಗು

2-00 ಪಿ. ಎಂ.

ವುದಿಲ್ಲ. ಈಗ ಇರುವಂತಹ ನಿರುದ್ಯೋಗ ಸಮಸ್ಯೆಯ ಜೊತೆಗೆ ತಾವು ಇನ್ನು ನಿರುದ್ಯೋಗ ಸಮಸ್ಯೆಯನ್ನು ಜಾಸ್ತಿ ಮಾಡುತ್ತಿದ್ದೀರಿ. ಆದ್ದರಿಂದ ನಾನು ಮಾನ್ಯ ಜೆ. ಪಟೇಲ್. ಪಟೀಲ್ ರವರನ್ನು ಕೇಳಿಕೊಳ್ಳುತ್ತೇನೆ. ತಮ್ಮ ಧೋರಣೆಯನ್ನು ಬಿಟ್ಟು ಇಡೀ ದೇಶ ಒಪ್ಪಿಕೊಂಡು ಬಂದಿರತಕ್ಕಂಥ ಧೋರಣೆಯನ್ನು ಆಳವಡಿಸಿಕೊಳ್ಳಿ. ಆ ಧೋರಣೆಯನ್ನು ಜಾರಿಗೆ ತನ್ನಿ. ನಾನು ಈ ವಿಚಾರದ ಬಗ್ಗೆ ಕೈಗಾರಿಕಾ ಇಲಾಖೆಯ ಡಿಮ್ಯಾಂಡ್‌ಗಳು ಬಂದಾಗ ವಿಸ್ತಾರವಾಗಿ ಮಾತನಾಡುತ್ತೇನೆ. ಈಗ ತಾವು ತಂದಿರತಕ್ಕಂಥ ಬಿಲ್‌ನಲ್ಲಿ ಮೂಲಭೂತವಾದ ಕೆಲವು ತಪ್ಪುಗಳು ಇವೆ. ಅದನ್ನು ಮೊದಲು ಹೇಳುತ್ತೇನೆ. ನಂತರ ಬೇರೆ ವಿಷಯಕ್ಕೆ ಬರುತ್ತೇನೆ. ಈ ಒಂದು ಇಂಡಸ್ಟ್ರೀಯಲ್ ಬಿಲ್ ಏನು ತೆಗೆದುಕೊಂಡು ಬಂದಿದ್ದೀರಿ ಮೊದಲ ಪ್ರಶ್ನೆ ಇದರಲ್ಲಿ ನನಗೆ ಕಂಡು ಬರುವುದು ಏನೆಂದರೆ, ಯಾವುದು ಹಿಂದಿನ ಆಕ್ಟ್ ಒಳಗೆ ಇದೆಯೋ ಅದನ್ನು ಇಲ್ಲ ಎಂದು ಕಲ್ಪನೆ ಮಾಡಿಕೊಂಡು ಪ್ರಿಂಟ್ ಮಾಡಿಸಿರುತ್ತೀರಿ. ಈ ರೀತಿ ಪ್ರಿಂಟ್ ಮಾಡಿಸಿರುವುದು ಸರಿಯೇ ? ಇದು ಬಿಲ್ ಆಗುತ್ತದೆಯೇ ಎಂಬುದನ್ನು ಕನ್ಸಿಡರ್ ಮಾಡಬೇಕಾದುದು ಪ್ರಶ್ನೆಯಾಗಿದೆ. ಇದಕ್ಕೆ ಅಮೆಂಡ್‌ಮೆಂಟ್ ಚಾಪ್ಟರ್ ೬ ಎಂದು ಹೇಳಿದ್ದೀರಿ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಹಿಂದಿನ ಆಕ್ಟ್‌ನಲ್ಲಿ ಏನಿದೆ ಅದು ಇಲ್ಲವೆನ್ನುವ ಕಲ್ಪನೆ ತಾವು ಮಾಡಿಕೊಂಡು ಈ ಬಿಲ್ಲು ಪ್ರಿಂಟ್ ಮಾಡಿಸಿದ್ದೀರಿ. ಇದು ಬಿಲ್ಲು ಆಗುತ್ತದೆಯೇ ? ಉದಾಹರಣೆಗೆ ಹೇಳುವುದಾದರೆ ಚಾಪ್ಟರ್ ೬ರಲ್ಲಿ ತಾವೇನು ಹೇಳಿದ್ದೀರಿ ಎಂದರೆ ಅದು ಈ ರೀತಿ ಇದೆ :

> "Amendment of Chapter VI–In the heading to Chapter VI of the principal Act, for the words, brackets and figures "Mysore Public Premises (Eviction of Unauthorised occupants) Act, 1974" shall be substitued."
> In Amendment of section 25 you have said :
>
> "In section 25 of the principal Act,–

(1) in the heading, for the words and figures "Mysore Act, 3 of 1962" the words and figures "Karnataka Act 32 of 1974" shall be substituted,

(2) in sub-section (1) for the words, brackets and figures "Mysore Public Premises (Eviction of Unauthorised Occupants) Act, 1961" the words, brackets and figures "Karnataka Public Premises (Eviction of Unauthorised Occupants) Act, 1974" shall be substituted,"

ಪ್ರಿನ್ಸಿಪಲ್ ಆಕ್ಟ್ ನಾನು ನೋಡಿದ್ದೇನೆ. ಅದರಲ್ಲಿ ಈ ರೀತಿ ಇಲ್ಲವೇ ಇಲ್ಲ. ತಮ್ಮಲ್ಲಿ ಯಾವುದು ಇಟ್ಟುಕೊಂಡಿದ್ದೀರೋ ನನಗೆ ಗೊತ್ತಿಲ್ಲ. ಚಾಪ್ಟರ್ ೬ ರಲ್ಲಿ ಏನಿದೆಯಂದರೆ ಅದು ಈ ರೀತಿ ಇದೆ.

"Chapter VI-Application of the Karnataka Public Premises (Eviction of Unauthorised Occupants) Act 1961 and Non-application of Karnataka Rent Control Act 1962 Board premises"

Here why should you change the heading? Changing the heading does not arise. And since you want to change the heading "Karnataka Public Premises (Eviction of Unauthorised occupants) Act 1961" in a different manner I want to say it does not read as "Mysore Public Premises (Eviction of Unauthorised Occupants) Act 1961" in the original Act. ಒರಿಜಿನಲ್ ಆಕ್ಟ್‌ನಲ್ಲಿಯೇ "ಮೈಸೂರು" ಎಂದು ಇದ್ದುದ್ದನ್ನು ಕರ್ನಾಟಕ ಎಂದು ಮಾಡಿದೆ. ಮತ್ತೆ ತಾವು ಈಗ ಕರ್ನಾಟಕ ಎಂದು ಪತಕ್ಕೆ ಮಾಡಿದ್ದೀರೋ ನನಗೆ ಅರ್ಥವಾಗುತ್ತಿಲ್ಲ. ನಾನು ವಿಧಾನಸಭೆಯ ಲೈಬ್ರರಿಯಿಂದ ತರಿಸಿ ನೋಡಿದ ಪುಸ್ತಕದಲ್ಲಿ ಕರ್ನಾಟಕ ಎಂದೇ ಇದೆ. 'Karnataka Industrial Areas (Amendment) Act, 1978' ತಾವು ಇದನ್ನು ಪತಕ್ಕೆ ಅಳವಡಿಸಿಕೊಳ್ಳಲಿಲ್ಲವೋ ನನಗೆ ಗೊತ್ತಾಗಲಿಲ್ಲ. ತಾವು ಬೇಕಾದರೆ ನೋಡಿ. 'Mysore Public Premises (Eviction of unauthurised occupants) Act 1974'. 'Karnataka' is already there. "Karnataka Public Premises (Eviction of Unauthorised Occupants) Act 1961 shall apply". It is there in Section 25 of the Original Act, ಇದರಲ್ಲಿ ಇದೆ. ಆದ್ದರಿಂದ ಮತ್ತೆ ತಾವು ಬದಲಾವಣೆ ಮಾಡುವ ಅವಶ್ಯಕತೆ ಬರುವುದಿಲ್ಲ. I don't know how you got it, where you have got it.

SRI J.H. PATEL.—Technical mistake.

SRI M.S. KRISHNAN.—It is not just technical because you have brought a bill here saying that the 'Karnataka' is to be changed as Mysore. It is already there. You must withdraw the amendment or you must bring another amendment which is in consonance with the reality of the situation. Both are not there.

SRI J.H. PATEL.—'Mysore Public Premises (Eviction of Unauthorised occupants) I961' has certain references and background for this Act. The principal Act was this 'Karnataka

Industrial Areas Development Act 1966', then an amendment in 1971 and some changes, I think, in 1974 also. So chronologicol orderನಲ್ಲಿ ಕೊಟ್ಟಿಲ್ಲ. 'Mysore Public Premises (Unauthorised Occupants) Act of 1961ರ ಪ್ರಕಾರ ಅವರ ಪ್ರತಿನಿಧಿಗಳು ಬೋರ್ಡಿನಲ್ಲಿ.....

SRI M.S. KRISHNAN.—I have not made myself understood. ತಮ್ಮ ಮನಸೂದೆ ಪ್ರಕಾರ ಏನು ಹೇಳಿದ್ದೀರೆಂದರೆ:

> "Amendment of Chapter VI–In the heading to Chapter VI of the principal Act, for the words, brackets and figures "Mysore Public Premises (Eviction of Unauthorised occupants) Act 1961" the words, brackets and figures "Karnataka Public Premises (Eviction of Unauthorised occupants) Act 1974" shall be substituted".

SRI M.S. KRISHNAN.—The implication of this one is that in the original Act Chapter No. 6 the heading is "Mysore Public Premises (Eviction of Unauthorised occupants) Act 1961". That is the implication. But if you see the original Act, I saw the original Act, it says i.e., the Chapter heading says, "Application of the Karnataka Public Premises (Eviction of unauthurised occupants) Act 1961, and 'Non-application of Karnataka Rent Control Act 1961 to Board Premises". Where is the question of amendment to that heading? Already the heading is 'Karnataka Public Premises (Eviction of Unauthorised occupants) Act'. That is what I am saying. The question of 'Mysore' does not arise. It is not there in the original Act. You have not seen the original Act or you have been misguided. That is what I have been saying. If you are misguided, you will do well to withdraw the amendment or bring about a fresh amendment. That is the only thing you can do. You cannot do anything else now because you have placed on the floor of the House. That is why I request you. I am reading from the original Act. Similarly you will see in Amendment to Section 25 i.e., Clause 6 of the Bill which you are now moving, reads:

> "In section 25 of the principal Act,–
>
> (1) in the heading, for the words and figures "Karnataka Act 32 of 1974" shall be substituted:"

In Section 25 of the principal Act it must contain 'Mysore Act of 1962'. But it is not there. The principal Act says and I will read it out:

> "Application of Karnataka Act 3 of 1962 to Board Premises :
>
> The State Government may by notification provide from such date as may be specified in the notification that the Karnataka Public Premises (Eviction of Unauthorised occupants) Act 1961 shall appply to premises belonging to,

vesting in or released by the Board that Act applies in relation to public premises subject to the provisions of sub-section 2 or a notification being issued under sub-section of the aforesaid Act and the rules made thereunder, shall apply to the premises of the Board with the following modifications *i.e.*, the State Government may appoint any Officer whether under the Government or the Board as it thinks fit to be a competent officer for the purpose set in the aforesaid Act; the reference to public premises in that Act and the rules shall be deemed to be reference to the premises of the Board and reference to the State Government in Section 6, 7, 8 and and 11 of the Act shall be deemed to be reference to the Board."

So the question of Mysore does not arise in this original Act. When there is no necessity for amendment, if an amendment is brought under an imagination, it does not become an amendment. It is not constitutionally valid also when you bring a Bill before this hon'ble House. you can see this. I have gone through this book given by the Legislature Library just now when I called for it. This is Karnataka Industrial Areas Deveiopment Act 1966. My honest submission is either you have to re-amend it or you must prove that the original Act does contain the words which it is supposed to contain. it is not just technical. It is a question of implication of an Amending Bill being brought here. (Pause) Let him come. He has gone for consultations. ಇನ್ನೊಂದು ನೋಡಿ ಕ್ಲಾಸ್ ಒರಲ್ಲಿ ತಾವು ಕೊಟ್ಟಿದ್ದೀರಿ. If you could see this Annexure to this Bill, Chapter VI it is said " Karnataka Public Premises (Eviction of Unauthorised Occupants) Act, 1961. In the original it is " Mysore Public premises (Eviction of Unauthorised Occupants) Act, 1961. In the original act it is not there. I do not know that was printed. i think this was printed would like to be enligtened.

SRI K. H. PATIL.—Even in the Statement of Objects and Reasons, it is not said that this is brought just because of change of name.

" It is proposed to provide for constitution of Board on a broader basis by including the different authorities connected with industrial development in the State so that there can be better co-ordination and effective implementation of various programmes taken up by the Board."

The arguement that you have adduced that it is brought for only the change of name, is not correct. It is to change the constitution of the Board.

SRI M. S. KRISHNAN.—If you please consider my points you will see that your Bill does become improper and unconstitutional. It is only informative. It will be challenged. If it is challenged, you are the person, who will be put in to difficulty. the second point where some explanation is required from you is the amendment to Section 25 of the principal act, clause (3):

> "in sub-section(2), in clause (b), for the figures and words "11 and 12", the figures ahd words "14,15,16, and 17" shall be substituted."

What is this 14, 15, 16 and 17 ? Please amplify it. It is not just numbering here. ಈ ವಿಷಯು ನನಗೆ ಅರ್ಥವಾಗುತ್ತಿಲ್ಲ. ಇದನ್ನು ಸ್ವಲ್ಪ ವಿವರವಾಗಿ ಹೇಳಿದರೆ ಒಳ್ಳೆಯದು. I do not know whether some explanation is needed 11 & 12 are alright. It is there in the original Act. i am not able to comprehend this 14, 15, 16 and 17 from the Bill nor from the original Act. This is the second point. The third point is, you said it is technical point. It is only informative, It should not be challenged. Your law officers will be able to tell you much better. ಇದರ ಗುರಿ ಏನೆಂಬುದು ಇನ್ನೊಂದು ಮೂಲಭೂತವಾದ ಪ್ರಶ್ನೆ. ಇದರೊಳಗೆ ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ಸಾಧಿಸುವುದಕ್ಕೋಸ್ಕರ ಏನು ಮಾಡಬೇಕೆಂದು ಪಂಕ್ಷನ್ಸ್ ಆಫ್ ದ ಬೋರ್ಡ್‌ನಲ್ಲಿ ಚಾಪ್ಟರ್ ೪, ಕ್ಲಾಸ್ ೧೩ ರಲ್ಲಿ ಹೇಳಿದ್ದಾರೆ.

" Functions of the Board shall be:

(i) generaily to promote and assist in the rapid and orderly establishment, growth and development of industries in industrial areas,

(ii) in particular and without prejudice to the generality of clause (i), to

(a) develop industrial areas declared by the State Government and make them available for undertakings to establish themselves;

(b) establish, maintain, develop and manage industrial estates within industrial areas;

(c) undertake such scheme or programmes of works either jointly with other corporate bodies or institutions, or with the government or local or statutory authorities, or on an agency, as it considers necesary or desirable for furtherance of the purposes for which the Board is established and for the purposes connected therewith.

Act deals with general powers of the Board in Clause 14,

ಇದೆಲ್ಲ ಪೇಜ್ ೭ರಲ್ಲಿ ಇದೆ. ಈಗ ಪ್ರಶ್ನೆ ಏನು ಎಂದರೆ ಈ ಕೆಲಸಗಳನ್ನು ಮಾಡುವುದಕ್ಕೆ ಅಧಿಕಾರಿಗಳನ್ನು ನೇಮಿಸಬೇಕೆಂಬುದು ಸೆಕ್ಷನ್ ೬ನಲ್ಲಿ ಕಾನ್‌ಸಿಟ್ಯೂಷನ್ ಆಫ್ ಬೋರ್ಡ್ ಬಗ್ಗೆ ಇದೆ. ಸೆಕ್ಷನ್ ೬ಸಿ ಅನ್ನು ತಿದ್ದುಪಡಿ ಮಾಡಿದ್ದೀರಿ. Insted of Director of Industries and Commerce, 'c' becomes, the Secretary to Government

Housing and urban Development; Department; (ca) the Commissioner for Industrial Development and Directorof Industries and Commerce; (cb) the Chairman and Managing Director, Karnataka State Industrial Investment and Development Corporation Ltd.,, (cc) the Chairman, Karnataka State Pollution Control Board· (cd) the Director or Town Planning; (ce) the Managing Director, Karnataka State Small Industries Development Corporation Ltd, and clause 'e' becomes, two nominees of the Industrial Development Bank of India. ನನ್ನ ಒಂದು ಅಭಿಪ್ರಾಯ ಇದೆ. ಆದರೆ, I am not opposed to this inclusion. probably this is for coordination, What I want to know is, why you have omitted the nominee of KSFC, the State Finance Corporation. I think this Corporation is an essential element in the development of industries in our country. Their performance is good. Apart from it, they are the essential ingriedients. When you set up industries, the question of finance also arises. When the finance department personality is there, I think the KSFC nominee should also be there. There has been a lot of criticism. ಯಾವರೀತಿ ಹಣ ಕೊಡಬೇಕು, ಎಂಬ ಬಗ್ಗೆಯೆಲ್ಲ ಸಾಕಷ್ಟು ಚರ್ಚೆಯಾಗಿ ಟೀಕೆಗಳು ಬಂದಿವೆ. ಆದರ ಆಧಾರದ ಮೇಲೆ ನನಗನ್ನಿಸುವು ದೇನೆಂದರೆ ಇವರೂ ಕೂಡ ಇರಬೇಕು ಎಂಬುದು. ತಾವು ಸಾಕಷ್ಟು ಅನುಭವಿಗಳು, ಆದ್ದರಿಂದ ಅವರನ್ನು ಇದರಲ್ಲಿ ಸೇರಿಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಇದರಿಂದ ೭ ಜನ ಆಗುತ್ತಾರೆ You have to amend this clause on the Constitution of the Board I do not know whether you had given thought to it.

> "(e) one member nominated by the State Government from among persons appearing to the State Government to be qualified as having had experience, of, and having shown capacity in, industry or trade or finance, or who is in the opinion of the State Government capable of representing the interests of industry or commerce."

This is such a wide thing, this particular clause 6. "from among persons appearing to the State Government to be qualified as having had experience. "You have taken the discretion. discretion is always there. ಈ ರೀತಿ ಡಿಸ್ಕ್ರಿಷನರಿ ಪವರ್ಸ್ ಇದ್ದರೆ ಅವರ ಪಕ್ಷದವರನ್ನೇ, ಇಷ್ಟ ಬಂದವರನ್ನೇ ಹಾಕುವ ಸಂದರ್ಭ ಬರುತ್ತದೆ. ಇದೆಲ್ಲ ಹಿಂದೆ ನಡೆದಿದೆ. ಗುರಿ ಇದರಿಂದ ಆದಂತಾ ಗುವುದಿಲ್ಲ. ಜನತಾ ಪಕ್ಷ ಅಧಿಕಾರದಲ್ಲಿರುವುದರಿಂದ ಅವರಿಗೆ ಬೇಕಾದ ಇಂಡಸ್ಟ್ರಿಯಲ್ಲಿಸ್ಟ್ಸ ಮತ್ತು ಫೈನಾನ್ಸಿಯರ್ಸ್‌ಗಳನ್ನು ಹಾಕಿಕೊಳ್ಳಬಹುದು. ಕಾಂಗ್ರೇಸ್‌ನವರು ಇದನ್ನು ಮಾಡುತ್ತಿದ್ದರು. ನನ್ನ ಅಭಿಪ್ರಾಯವೇನೆಂದರೆ ಇಂಥದೆಲ್ಲ ಆಗುವುದಕ್ಕೆ ಅವಕಾಶವೇ ಕೊಡಬಾರದು ಎಂದು. ಕರ್ನಾಟಕ ಚೇಂಬರ್ ಆಫ್ ಕಾಮರ್ಸ್‌ನ ಪ್ರತಿನಿಧಿಗಳನ್ನು ಹಾಕಿದ್ದರೆ ಸರಿಯಾಗುತ್ತಿತ್ತು. It will give room for lot of whims and fancies of the Government. You will be open to the charges by the public as well as by many such organisations. ಈಗ ಇಷ್ಟ ಬಂದವರನ್ನೆಲ್ಲ ಹಾಕುವುದಕ್ಕೆ ಅವಕಾಶ ಇರುತ್ತದೆ. ಆರ್ಗನೈಜೇಷನ್ಸ್, ಏನಿವೆ ಅವೂ ಸಹ ನಮ್ಮನ್ನು ಹಾಕಿ ಎಂದು ಹೇಳುವುದಕ್ಕೆ ಅವಕಾಶ ಇರುತ್ತದೆ. ಸಮಗ್ರವಾಗಿ ಇದನ್ನು ಯೋಚನೆ ಮಾಡಿದರೆ ಒಳ್ಳೆಯದಾಗುತ್ತದೆ. ಇವಕ್ಕೆಲ್ಲ ಸಮರ್ಪಕವಾಗಿ ಉತ್ತರ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

† ಶ್ರೀ ಆರ್. ಮೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ನನಗಂತೂ ಒಂದು ಆನುಮಾನ ಇದೆ. ೮ ಜನ ಅಧಿಕಾರಿಗಳನ್ನು ನೇಮಕ ಮಾಡಿದ್ದೀರಿ, ಇವರು ಸಾಧಾರಣವಾಗಿ ೫೦ ಬೋರ್ಡ್‌ನಲ್ಲಿ ಇದ್ದಾರೆ, ಇವರು ಯಾವಾಗ ಸೇರುತ್ತಾರೆ ಎನ್ನುವುದು ಆನುಮಾನ ಬರುತ್ತದೆ. ಮೊನ್ನೆ ನಾನು ಡೈರೆಕ್ಟರ್ ಆಫೀಸಿಗೆ ಹೋಗಿದ್ದೆ ಅಲ್ಲಿನ ಬೋರ್ಡ್‌ನಲ್ಲಿ ನೋಡಿದರೆ ಇವತ್ತು ಇಷ್ಟು ಗಂಟೆಗೆ ಈ ಮೀಟಿಂಗ್ ಇದೆ, ಇಷ್ಟು ಗಂಟೆಗೆ ಇನ್ನೊಂದು ಮೀಟಿಂಗ್ ಇದೆ ಎಂದು ಹಾಕಿದ್ದರು. ಆವರ ಕಾನ್ಸಂಟ್ರೇಷನ್ ಆಫ್ ಪವರ್ಸ್ ನಿಜವಾಗಿಯೂ ಕೂಡ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಬಗ್ಗೆ ನಾವೇನು ಅಂದುಕೊಂಡಿದ್ದೇವೆ ಅದು ಆಗುತ್ತಿದೆಯೇ ಎಂಬ ಆನುಮಾನ ಬರುತ್ತದೆ. ಜೊತೆಗೆ ಏನೆಂದರೆ ಇಂಡಸ್ಟ್ರಿಸ್ ಎನ್ನುವುದು ಕೆಲವು ಅಧಿಕಾರಿಗಳ ಕೈಯಲ್ಲಿ ಗುತ್ತಿಗೆಯಾಗಿದೆ. ಲೈಸನ್ಸ್ ಸಿಗಬೇಕಾದರೆ ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಮಾನ್ಯ ಜೆ.ಹೆಚ್. ಪಟೇಲರಿಗೂ ಕೂಡಗೊತ್ತಿದೆ,ಗೊತ್ತಿಲ್ಲದೇ ಏನೂ ಇಲ್ಲ. ಇದರಿಂದಾಗಿ ಇಂಡಸ್ಟ್ರಿ ಅಭಿವೃದ್ಧಿಯಾಗುವುದಕ್ಕೆ ಆನುಕೂಲ ವಾಗುತ್ತಿಲ್ಲ. ಇನ್ನೊಂದು ವಿಷಯವೇನೆಂದರೆ ಮೊದಲು ಇದ್ದ ಕರ್ನಾಟಕ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಆ್ಯಕ್ಟಿವಿಟೀಸ್ ಈಗ ಬಹಳ ಜಾಸ್ತಿಯಾಗಿದೆ. ೧೦ ಪಾಲು ಜಾಸ್ತಿಯಾಗಿದೆ ಎಂದು ನಾನು ಅಂದುಕೊಂಡಿದ್ದೇನೆ. ಏಕೆಂದರೆ ಪ್ರತಿಯೊಂದು ತಾಲ್ಲೂಕಿನಲ್ಲಿ, ಜಿಲ್ಲಾ ಹೆಡ್ ಕ್ವಾರ್ಟರ್ಸ್‌ನಲ್ಲಿ ಕೂಡ ಡೆವೆಲಪ್‌ಮೆಂಟ್ ಆ್ಯಕ್ಟಿವಿಟೀಸ್ ಆಗುತ್ತದೆ ಆದರೆ ಅಲ್ಲಿ ಲೋಕಲ್ ಇನ್‌ವಾಲ್ವ್‌ಮೆಂಟ್ ಸ್ವಲ್ಪ ಕೂಡ ಇಲ್ಲವೇ ಇಲ್ಲ. ಯಾರು ಲೈಸನ್ಸ್ ಕೊಡುವವರು, ಯಾರು ಜಾಗ ಕೊಡುವವರು ಎಂದು ಗೊತ್ತಾಗುವುದಿಲ್ಲ. ಇದು ಪಂಡೋರಸ್ ಬಾಕ್ಸ್ ಇದ್ದಹಾಗೆ ಇರುತ್ತದೆ. ಲೋಕಲ್ ಇನ್‌ವಾಲ್ವ್‌ಮೆಂಟ್ ಮಾಡಿಸಿದರೆ ಅಲ್ಲಿ ಇಂತಹ ಏರಿಯಾ ಇದೆ, ಇಷ್ಟು ಸೈಟ್ಸ್ ಇದೆ ಎಂದು ಗೊತ್ತಾಗಬೇಕು. ಆದರೆ ಏನೂ ಗೊತ್ತಾಗುವುದಿಲ್ಲ. ಇಂಥ ಏರಿಯಾ ಡೆವಲಪ್‌ಮೆಂಟ್‌ಗೆ ಅಕ್ವೈರ್ ಮಾಡಿಕೊಂಡಿದ್ದಾರೆ, ೨೦ ಎಕರೆ ಮಾಡಿಕೊಂಡಿದ್ದಾರೆ ಇಷ್ಟು ಮಾತ್ರ ಗೊತ್ತಾಗುತ್ತದೆ. ಯಾರಿಗೆ ಕೊಡುತ್ತಾರೆ, ಯಾರು ಕೊಡುತ್ತಾರೆ ಎಂಬುದು ಗೊತ್ತಾಗುವುದಿಲ್ಲ. ಕೋಲಾರದಲ್ಲಿನ ಪ್ಲಾಟ್ಸ್ ಬಾಂಬೆಯಲ್ಲಿರುವವರಿಗೆ ಅಲಾಟ್ ಆಗುತ್ತದೆ. ಬೆಂಗಳೂರಿನಲ್ಲಿ ಯಾರೋ ಇಂಡಸ್ಟ್ರಿ ಮಾಡುವವರು ಬಂದು ಒಂದು, ಎರಡು ಎಕರೆ ಪಡೆಯುತ್ತಾರೆ. ಇಷ್ಟು ಪ್ಲಾಟ್ಸ್ ಖಾಲಿ ಇದೆ, ಇಷ್ಟು ಪ್ಲಾಟ್ಸ್ ಅಲಾಟ್‌ಮೆಂಟ್ ಮಾಡಲು ಅವಶ್ಯಕತೆ ಇದೆ, ಲೋಕಲ್‌ನವರು ಅರ್ಜಿ ಹಾಕಿ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಈಗ ೮ ಜನ ಮಾಡಿದ್ದೀರಿ. ಸ್ಟೇಟ್ ಲೆವೆಲ್ ಬಗ್ಗೆ ತಾವು ಒಂದು ಯೋಚನೆ ಇಟ್ಟುಕೊಂಡಿದ್ದೀರಿ ಎಂದು ನಾನು ಅಂದುಕೊಂಡಿದ್ದೇನೆ. ಡೈರೆಕ್ಟರ್ ಆಫ್ ಟೌನ್ ಪ್ಲಾನಿಂಗ್‌ನಲ್ಲಿ ಹೇಗೆ ಕೆಲಸ ಮಾಡುತ್ತಾರೆ ಎನ್ನುವುದು ತಮಗೇ ಗೊತ್ತಿದೆ. ಒಂದು ಪ್ಲಾನ್ ಮಾಡಿಕೊಡಿ ಎಂದು ಹೇಳಿದರೆ ಮೂರು ವರ್ಷವಾಗುತ್ತದೆ ಆಷ್ಟರಲ್ಲಿ ಬಿಲ್ಡಿಂಗ್ ಗ್ರಾಂಟ್ಸ್ ಎಲ್ಲಾ ಲ್ಯಾಪ್ಸ್ ಆಗುತ್ತದೆ. ಅದೇ ರೀತಿ ಡೈರೆಕ್ಟರ್, ಸೆಕ್ರೆಟರಿಗಳನ್ನು ನೋಡಿದ್ದೀರಿ. ಕಂಪಲ್ಸರಿಯಾಗಿ ಒಂದು ತಿಂಗಳಿಗೊ ಏನೋ ಮೀಟಿಂಗ್ ನಡೆಯಲೇಬೇಕೆಂದು ಮಾಡಬೇಕು. ಆದರಲ್ಲಿ ಕೂತುಕೊಂಡರೆ ಐ.ಎ.ಎಸ್. ಆಫೀಸರ್ಸ್ ಬಾಕ್ಸ್‌ನಲ್ಲಿ ಕುಳಿತುಕೊಳ್ಳುತ್ತಾರೆ. ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಅಲ್ಲ ಏನೋ ಕೆಲವು ಸೀರಿಯಸ್ ವಿಷಯಗಳು ಡಿಸ್‌ಕಷನ್ ಆಗುತ್ತದೆ, ಅದೂ ಅರ್ಧಂಬರ್ಧ ಡಿಸ್‌ಕಷನ್ ಆಗುತ್ತದೆ ಎಂದು ಮಾನ್ಯ ಶ್ರೀನಿವಾಸ್‌ರವರು ಹೇಳಿದರು. ನನಗಂತೂ ಗೊತ್ತಿಲ್ಲ. ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಆಗದೇ ಅನ್ ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್ ಸಾಲ್ವ್ ಆಗುವುದಿಲ್ಲ. ಎಲ್ಲಾ ಕಡೆ ಡೆವೆಲಪ್‌ಮೆಂಟ್ ಆಕ್ಟಿವಿಟೀಸ್ ಪ್ರಾರಂಭವಾಗಿದೆ ಆದರೆ ನಮ್ಮ ಕೈಗೆ ಎಟಕುತ್ತಿಲ್ಲ ಲೋಕಲ್ ಇನ್‌ವಾಲ್ವ್‌ಮೆಂಟ್ ಜಾಸ್ತಿ ಇರಬೇಕು. ಒಂದು ಡಿಸ್ಟ್ರಿಕ್ಟ್ ಸ್ಮಾಲ್ ಕಮಿಟಿ ಮಾಡಿ. ಎಲ್ಲೆಲ್ಲಿ ಅಡ್ವಾನ್ಸ್‌ಮೆಂಟ್ ಇದೆಯೋ, ಎಲ್ಲಿ ಅಕ್ವೈರ್ ಮಾಡಿಕೊಂಡಿದ್ದೀರೋ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಆ್ಯಕ್ಟ್ ಪ್ರಕಾರ, ಅಲ್ಲಿ ಕಮಿಟಿ ಮಾಡಿ. ಇಂಡಸ್ಟ್ರಿ ಬಗ್ಗೆ ಅಕ್ಕರೆ ಇರುವವರು, ಸ್ಥಳೀಯ ಶಾಸಕರಿದ್ದರೆ ಅವರನ್ನು ಸೇರಿಸಿಕೊಂಡು ಮಾಡಿ, ಯಾವ ಪಾರ್ಟಿಯವರೇ ಆಗಲೀ, ಇಂತಹ ಕಡೆ ಪ್ಲಾಟ್ಸ್ ಇದೆ, ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಪಾಸಿಬಲಿಟೀಸ್ ಇದೆ ಎಂದು ಗೊತ್ತಾಗುತ್ತದೆ. ಇದು ಬಹಳ ಮುಖ್ಯ. ಇದಕ್ಕೆ ಹೆಚ್ಚಿಗೆ ಗಮನಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದು ನನ್ನ ಸ್ವಂತ ಅನುಭವ. ನಮ್ಮ ಏರಿಯಾದಲ್ಲಿ ಸಿ–ಳ ಕಡೆ ಇದೆ ಆದು ಎಲ್ಲಿ ಇದೆಯೆಂದು ತಾಸಕರಿಗೇ ಗೊತ್ತಿಲ್ಲ, ಕೋಲಾರದಲ್ಲಿ ಯಾರಿಗೂ ಗೊತ್ತಿಲ್ಲ. ಲೋಕಲ್ ಇನ್‌ವಾಲ್ವ್‌ಮೆಂಟ್ ಮಾಡಿಸಿದರೆ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಆಗುತ್ತದೆ. ಇಂಡಸ್ಟ್ರಿ ಬಗ್ಗೆ ಕಾಳಜಿ ಇರುವವರು ಇಲ್ಲದಿದ್ದರೆ ಆ ಏರಿಯಾದ ಬಗ್ಗೆ ಸ್ವಲ್ಪ ಕಾಳಜಿ ಇರುವವರು, ಲೋಕಲ್ ಅಥಾರಿಟೀಸ್‌ನಲ್ಲಿರುವವರನ್ನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡಿದರೆ ಅವರು ಸ್ವಲ್ಪ ಪ್ರಚಾರ ಮಾಡಿ ಯಾರು ಇನ್‌ವೆಸ್ಟ್ ಮಾಡುವುದಕ್ಕೆ ರೆಡಿಯಿದ್ದಾರೆ ಅಂತಹವರನ್ನು ಕರೆದುಕೊಂಡು ಬಂದು ಇಂಡಸ್ಟ್ರಿ ಪ್ರಾರಂಭ ಮಾಡಿ ಎಂದು ಹೇಳುವುದಕ್ಕೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಇಲ್ಲವೇ ಡೈರೆಕ್ಟರ್ ಆಫ್ ಕಾಮರ್ಸ್ ಇಲ್ಲವೇ ಸೆಕ್ರೆಟರಿ ಟು ಕಾಮರ್ಸ್‌ರವರ ಹತ್ತಿರ ಬರಬೇಕಾಗುತ್ತದೆ. ಅದು ಸಾಧ್ಯವೇ ಇಲ್ಲ. ತಮಗೇ ಗೊತ್ತು ಅವರು ಯಾವ ರೀತಿ ಕೆಲಸ ಮಾಡುತ್ತಾರೆ ಎಂದು. ಇದಕ್ಕೆ ಅಮೆಂಡ್‌ಮೆಂಟ್ ಮಾಡುವುದಕ್ಕೆ ಹೊರಟಿದ್ದೀರಿ ಈ ಬಗ್ಗೆ ತಾವು ಯೋಚನೆ ಮಾಡಿ. ನಮ್ಮ ಕರ್ನಾಟಕದಲ್ಲಿ ಇಂಡಸ್ಟ್ರೀಸ್ ಅಭಿವೃದ್ಧಿಯಾಗಬೇಕೆಂದರೆ ಇದು ಇರಲೇಬೇಕು. ತಮಿಳುನಾಡಿಗೆ ಹೋಗಿ ನೋಡಿದರೆ ಅಲ್ಲಿ ಇಂಡಸ್ಟ್ರಿಯಲ್ ಡೆವೆಲಪ್‌ಮೆಂಟ್ ಬಹಳ ಚೆನ್ನಾಗಿದೆ. ಆನ್ ಇಮ್ಯಾಜಿನಬಲ್ ಡೆವಲಪ್‌ಮೆಂಟ್ ಆಗಿದೆ. ಅಲ್ಲಿ ಜಾಸ್ತಿ ಲೋಕಲ್ ಇನ್‌ವಾಲ್ವ್‌ಮೆಂಟ್ ಮಾಡಿಸಿದೆ. ಅಲ್ಲಿ ಅವರೇ ಹೋಗಿ ಪ್ರಚಾರ ಮಾಡಿ ಇಂತಹ ಕಡೆ ಸೈಟ್ ಇದೆ ಇಂಡಸ್ಟ್ರಿ ಹಾಕಿ ಎಂದು ಸಾಹುಕಾರರ ಹತ್ತಿರ ಹೋಗಿ ಹೇಳುವ ಪರಿಸ್ಥಿತಿ ಇದೆ. ನಮ್ಮಲ್ಲಿ ಅದೂ ಇಲ್ಲ. ಫ್ಲೋಅಫ್ ಕಾನ್‌ಸಂಟ್ರೇಷನ್ ಆಫ್ ಪವರ್. ಎಲ್ಲೆಲ್ಲಿ ಅಕ್ವೈರ್ ಮಾಡಿಕೊಂಡಿದ್ದೀರಿ ಅಲ್ಲಿ ಒಂದು ಸಣ್ಣ ಕಮಿಟಿಯನ್ನು ಮಾಡಿ. ಅವರ ಅಧ್ಯಕ್ಷತೆಯಲ್ಲಿ ಕೆಲವು ಶಾಸಕರನ್ನು, ಕೆಲವರು ಇಂಡಸ್ಟ್ರೀಸ್‌ನಲ್ಲಿ ಸ್ವಲ್ಪ ಅಕ್ಕರೆ ಇರುವವರನ್ನು ಅವರೆಲ್ಲರನ್ನೂ ಸೇರಿಸಿ ಒಂದೊಂದು ಕಮಿಟಿ ಮಾಡುವುದು ಬಹಳ ಮುಖ್ಯ. ಇಲ್ಲದಿದ್ದರೆ ನಾವು ಇಂಡಸ್ಟ್ರೀಸ್‌ನಲ್ಲಿ ಅಡ್ವಾನ್ಸ್‌ಮೆಂಟ್ ಆಗುವುದಿಲ್ಲ ಎಂದು ನನ್ನದು ಒಂದು ಸಲಹೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ತಮ್ಮದು ಅಪ್ಪಣೆ ಪಡೆದು ಒಂದೇ ಒಂದು ಹೇಳುತ್ತೇನೆ. I was referring to the correction which has to be made. In Page 493 of the book of Kaul and Shakdhar it is stated as follows :—

> "Correction of patent errors ;-No alteration can be made in a Bill as introduced or as reported by a Select or Joint Committee except by way of an amendment adopted in the House. However, the Speaker has the power to correct any obvious printing or clerical error at any stage of a Bill by issue of a corrigendum to the Bill, provided such a correction does not relate to an error affecting taxation in a secret Bill printed by the Ministry concerned before introduction (a).
>
> After introduction of the Finance Bill, 1956, a written request was to the Speaker by the Government for carrying out corrections of certain printing errors, one of which had the effect of altering the duty on certain goods from '55' per cent to 155 per cent, the Speaker did not accept this correction.
>
> With the permission of the Chair, the Minister of Finance made a statement on the floor of the House drawing attention to the printing error (b). Later, during the clause-by-clause consideration of the Bill he moved a formal amendment for substituting the figure '155' for '55' which was adopted by the House (c).
>
> Even after a Bill has been passed by Lok Sabha, the Speaker has the authority to correct patent errors and make such other changes in the Bill as are consequential upon the amendments accepted by the House."

ನಾನು ಹೇಳುತ್ತಿರುವುದು ಇಷ್ಟೆ. ನನಗೆ ಇದರಲ್ಲಿ ಎರರ್ ಕಂಡುಬರುತ್ತದೆ. He should bring an amendment now. If he does not do it then it becomes a patent error. Knowing fully if we accept it, it is not correct at all. It is not legally correct. ಇಷ್ಟೇ ಮಾತ್ರ ಅವರು ಹೇಳಬೇಕು. ಇದಕ್ಕೆ ತಮ್ಮ ಸಹಕಾರ ಮತ್ತು ಸಹಾಯ ಬೇಕಾಗುತ್ತದೆ. ಇಲ್ಲದಿದ್ದರೆ ಅವರು ಕೋಳಿಗೆ ಮೂರೇ ಕಾಲು ಇರುವುದು ಎಂದು ಹೇಳಿದರೆ ಬಹಳ ಕಷ್ಟವಾಗುತ್ತದೆ.

ಅಧ್ಯಕ್ಷರು.—ಪಟೇಲರೇ, ಉತ್ತರ ಹೇಳಿ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಈ ತಾಂತ್ರಿಕ ತಪ್ಪುಗಳು ಮತ್ತು ಅದರ ಒಳಗಿರತಕ್ಕಂಥ ಅಂಕಿ ಸಂಖ್ಯೆಗಳು ತಪ್ಪಾಗಬಾರದು ಎಂದು ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಈ ಸದನದಲ್ಲಿ ಎಂತಹದೇ ತಪ್ಪಾಗಬಾರದು. ಇದರ ಬಗ್ಗೆ ಅನಂತರ ಬರುತ್ತೇನೆ. ಕೆಲವು ವಿಚಾರಗಳನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ನನ್ನ ಔದ್ಯಮಿಕ ನೀತಿಯ ಬಗ್ಗೆ ಮತ್ತು ನಾವು ಹೇಳಿದ್ದನ್ನು ಮಾಡಿಲ್ಲ, ಒಂದು ತಿಂಗಳಿಗೆ ಒಂದು ಸಾವಿರ ಉದ್ಯಮಗಳನ್ನು ಮಾಡುತ್ತೇವೆ ಎಂದು ಮಾಡಿಲ್ಲ ಎಂದು ಮಾನ್ಯ ಬಂಗಾರಪ್ಪನವರು ಹೇಳಿದರು. ನಮ್ಮ ರಾಜ್ಯದಲ್ಲಿ ಉದ್ಯಮದ ಪ್ರಗತಿ ಆಗುತ್ತಿಲ್ಲ, ಮತ್ತು ನಮ್ಮಲ್ಲಿರತಕ್ಕಂಥ ಕಚ್ಚಾವಸ್ತುಗಳನ್ನು ಬೇರೆ ಕಡೆ ಕೊಡುತ್ತೇವೆ ಎಂದು ಹೇಳಿದರು. ಅದು ಇಡೀ ರಾಷ್ಟ್ರದ ಹಿನ್ನೆಲೆಯಲ್ಲಿ ವಿಚಾರ ಮಾಡಿ ಹೇಳತಕ್ಕಂಥ ವಿಷಯ. ಇನ್ನೊಂದು ಸಾರಿ ಯಾವಾಗಲಾದರೂ ಹೇಳುತ್ತೇನೆ. ಈಗ ಈ ಆಕ್ಟಿಗೆ ಸೀಮಿತವಾಗಿ ಒಂದು ಸಾವಿರ ಉದ್ಯಮಗಳನ್ನು ಮಾಡುತ್ತೇವೆ ಎಂದು ಹೇಳಿದ್ದೆವು. ಒಂದು ಸಾವಿರ ಆಗಿರಬಹುದು, ಎಂಟು ನೂರು ಆಗಿರಬಹುದು, ಒಂಭೈನೂರು ಆಗಿರಬಹುದು. ೧೯೮೫–೮೬ರಲ್ಲಿ ೧೧ ಸಾವಿರ ಉದ್ಯಮಗಳನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸನ್ನು ಸ್ಥಾಪನೆ ಮಾಡಿದ್ದೇವೆ. ೧೯೮೬–೮೭ರಲ್ಲಿ ಫೈನಲ್ ಆಗಿ ಇನ್ನೂ ಹೆಚ್ಚು ಕಡಿಮೆ ನಾವು ತಿಂಗಳಿಗೆ ಒಂದು ಸಾವಿರ ಮಾಡುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಆ ಗುರಿಯ ಪ್ರಕಾರ ಹೋಗುತ್ತಿದ್ದೇವೆ. ಎಲ್ಲಿ ವಿದ್ಯುಚ್ಛಕ್ತಿ ಬೇಡವೋ ಅಂಥ ಸಣ್ಣ ಸಣ್ಣ ಯೂನಿಟ್‌ಗಳು ಏನು ಇದೆಯೋ ಅದರ ಬಗ್ಗೆ ಹೆಚ್ಚು ಏನ್‌ಕರೇಜ್ ಮಾಡುತ್ತಿದ್ದೇವೆ ಹಾಗೂ ಬಹಳ ಹಿಂದುಳಿದ ಪ್ರದೇಶಗಳಿಗೆ ನಾವು ಆದ್ಯತೆಯನ್ನು ಕೊಡುತ್ತಿರುವುದರಿಂದ ಈಗಾಗಲೇ ಗುಲ್ಬರ್ಗ ಮತ್ತು ಬೀದರ್ ಡಿಸ್ಟ್ರಿಕ್ಟ್‌ಗಳಿಗೆ ಆದ್ಯತೆಯನ್ನು ಕೊಡುತ್ತಿದ್ದೇವೆ. 'ನೋ ಇಂಡಸ್ಟ್ರಿ ಡಿಸ್ಟ್ರಿಕ್ಟ್' ಎಂದು ಪೆಸರಾಗಿದ್ದ ಆ ಪ್ರದೇಶಗಳಿಗೆ ಈಗ ಗೌರ್ನಮೆಂಟ್ ಆಫ್ ಇಂಡಿಯಾದವರು ಮತ್ತು ನಮ್ಮ ಸರ್ಕಾರದವರು ಸೇರಿ ಸಬ್ಸಿಡಿ ಕೊಟ್ಟು ಈಗ ಬಹಳ ವೇಗದಿಂದ ಬೀದರ್ ಡಿಸ್ಟ್ರಿಕ್ಟ್‌ನ್ನು ಇಂಡಸ್ಟ್ರಿ ಎಸ್ಟೇಟ್ ಆಗಲೀ, ಇಂಡಸ್ಟ್ರಿಯಲ್ ಇನ್‌ವೆಸ್ಟ್‌ಮೆಂಟ್ ಆಗಲೀ ಆ ರೀತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಈಗ ಅಲ್ಲಿ ಆ ರೀತಿ ಆಗುತ್ತಿದೆ.

೨–೩೦ ಪಿ.ಎಂ.

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕಾ ಮಂತ್ರಿಗಳು).—ತಮಗೆ ಆಕ್ಚುಯಲ್ ಆಗಿ ಹೇಳಬೇಕಾದರೆ ಕಳೆದ ಒಂದು ವರ್ಷದಿಂದ ಬೀದರ್ ಜಿಲ್ಲೆಗೆ ೪ ಕೋಟಿ ರೂಪಾಯಿ ಇನ್‌ವೆಸ್ಟ್ ಮಾಡಿದ್ದೇವೆ. ಅಲ್ಲಿ ಸುಣ್ಣದ ಕಲ್ಲು ಬಹಳ ಚೆನ್ನಾಗಿರುವುದು ಸಿಕ್ಕುತ್ತದೆ. ರಾಜ್ಯ ಸರ್ಕಾರದಿಂದ, ಕೇಂದ್ರ ಸರ್ಕಾರದಿಂದ ಈ ಬಗ್ಗೆ ಎಷ್ಟೋ ನೆರವು ಸಿಕ್ಕುತ್ತದೆ. ಆದುದರಿಂದ ಬಹಳ ಜನ ಹಣ ಹೂಡಿ ಅಲ್ಲಿ ಸಣ್ಣ ಪ್ರಮಾಣದ ಮತ್ತು ದೊಡ್ಡ ಪ್ರಮಾಣದ ಸಿಮೆಂಟ್ ಕಾರ್ಖಾನೆಗಳನ್ನು ಮಾಡಿದ್ದಾರೆ. ಅಲ್ಲಿ ಸಿಗತಕ್ಕಂಥ ಸುಣ್ಣದ ಕಲ್ಲು ಏನು ಇದೆ ಅದರ ಸ್ಪ್ಯಾಂಡರ್ಡೈಸ್ ಮತ್ತು ಕ್ವಾಂಟಿಟಿಮೈಸ್ ನೋಡಿದರೆ ಬಹಳ ಅತ್ಯುತ್ತಮವಾದ ಸುಣ್ಣದ ಕಲ್ಲು ನಮ್ಮ ದೇಶದಲ್ಲಿ ಬೀದರ್ ಜಿಲ್ಲೆಯಲ್ಲಿರುವುದು ಎಂದು ಕಂಡುಬಂದಿದೆ. ಆದುದರಿಂದ ಮಾನ್ಯ ಸದಸ್ಯರು ನಮ್ಮ ರಾಜ್ಯದಲ್ಲಿ ಉದ್ಯಮಗಳು ಬೆಳೆಯುತ್ತಾ ಇಲ್ಲ ಅಂತ ಹೇಳುವುದು ಸರಿಯಲ್ಲ. ಆದರೆ ಈ ಬಗ್ಗೆ ಸರ್ಕಾರದ ಗುರಿ ಎಷ್ಟು ಇತ್ತೋ ಅದಕ್ಕೆ ಸ್ವಲ್ಪ ಕಡಿಮೆಯಾಗಿರಬಹುದು. ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕೆ ಎಷ್ಟೋ ಜನ ಇಲ್ಲಿಗೆ ಬರುವುದಕ್ಕೆ ತಯಾರಿದ್ದಾರೆ. ಅವರು ಹಣಕಾಸಿನ ಸಂಸ್ಥೆಯಿಂದ ನೆರವು ಪಡೆದು ಕೊಂಡು ಇಲ್ಲಿಗೆ ಬರುತ್ತಾರೆ. ಆದರೆ ನಮ್ಮ ರಾಜ್ಯದಲ್ಲಿ ವಿದ್ಯುತ್ ಕೊರತೆ ಇರುವುದರಿಂದ ಅವರು ಬರುತ್ತಾ ಇಲ್ಲ. ಯಾರಾದರೂ ಬೆಂಗಳೂರು ಮತ್ತು ಮೈಸೂರು ಸುತ್ತಮುತ್ತ ದೊಡ್ಡ ದೊಡ್ಡ

ಕೈಗಾರಿಕೆಗಳನ್ನು ಹಾಕಬೇಕು ಎಂದು ಬಂದರೆ ನಾವು ಇಲ್ಲಿಗೆ ಬರಬೇಡಿ ಬ್ಯಾಕ್‌ವರ್ಡ್ ಏರಿಯಾಸ್‌ಗೆ ಹೋಗಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಕೆ.ಹೆಚ್. ಪಾಟೀಲ್.—ಬ್ಯಾಕ್‌ವರ್ಡ್ ಏರಿಯಾಸ್‌ನಲ್ಲಿ ಇನ್ನೂ ಕೈಗಾರಿಕೆಗಳು ಅಷ್ಟು ಪ್ರಗತಿಯಾಗಿಲ್ಲ, ಕುಂಠಿತವಾಗಿದೆ.

ಶ್ರೀ ಜೆ.ಹೆಚ್. ಪಟೇಲ್.—ಹಾಗೆ ಹೇಳುವುದು ಸರಿಯಲ್ಲ. ಆದರೆ ಈ ಬಗ್ಗೆ ಸರ್ಕಾರ ಆಪೇಕ್ಷೆ ಪಟ್ಟಷ್ಟು ಆಗಿಲ್ಲ ಎಂದು ಹೇಳಬಹುದು. ತಮ್ಮ ಗಮನಕ್ಕೆ ತರಬೇಕಾದರೆ ನಾನು ಬ್ಯಾಂಕಾಕ್ ಸಿಂಗಪೂರ್, ಹಾಂಗ್‌ಕಾಂಗ್‌ಗೆ ಹೋದಾಗ ನಾನ್ ರೆಸಿಡೆಂಟ್ ಇಂಡಿಯನ್ಸ್ ಬಂದು ಇಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದರು, ಒಟ್ಟು ೪೧ ಪ್ರಾಜೆಕ್ಟ್ ಬಗ್ಗೆ ಮಾತನಾಡಿಕೊಂಡು ಬಂದೆ. ಅದು ೨ ಕೋಟಿ ರೂಪಾಯಿನ ಪ್ರಾಜೆಕ್ಟ್ ಆಗಿರಬಹುದು. ೫ ಕೋಟಿ ರೂಪಾಯಿನ ಪ್ರಾಜೆಕ್ಟ್ ಆಗಿರಬಹುದು, ೧೦ ಕೋಟಿ ರೂಪಾಯಿನ ಪ್ರಾಜೆಕ್ಟ್ ಆಗಿರಬಹುದು, ೪೦ ಕೋಟಿ ರೂಪಾಯಿನ ಪ್ರಾಜೆಕ್ಟ್ ಆಗಿರಬಹುದು. ಆ ಪೈಕಿ ಈಗಾಗಲೇ ೨೧ ಜನ ಬಂದು ಅವರು ಹಾಕತಕ್ಕಂಥ ಕೈಗಾರಿಕಾ ಪ್ರದೇಶವನ್ನು ಗುರುತಿಸಿ, ತಮ್ಮ ಹತೋಟಿಗೆ ತೆಗೆದುಕೊಂಡಿದ್ದಾರೆ. ಈಗ ಅಲ್ಲಿ ಕೆಲವು ಸಿವಿಲ್ ವರ್ಕ್ಸ್ ಶುರುವಾಗಿದೆ. ಇನ್ನೂ ಕೆಲವು ಕೈಗಾರಿಕೆಗಳು ಇಲ್ಲಿಗೆ ಬರುವುದಕ್ಕೆ ತಡವಾಗಿದೆ ಕಾರಣ, ಅವರಿಗೆ ಕೇಂದ್ರ ಸರ್ಕಾರದಿಂದ ಕ್ಲಿಯರೆನ್ಸ್ ಬರುವುದು ತಡವಾಗಿದೆ, ಇನ್ನು ಕೆಲವಕ್ಕೆ ಫಾರಿನ್ ಎಕ್ಸ್‌ಚೇಂಜ್ ಬರುವುದು ತಡವಾಗಿದೆ. ನಮ್ಮ ಸರ್ಕಾರದಿಂದ ಹಾಗೂ ಕೇಂದ್ರ ಸರ್ಕಾರದಿಂದ ನೆರವು ಪಡೆದಿರತಕ್ಕಂಥ ಕೆಲವು ಸಣ್ಣ ಯೂನಿಟ್ಸ್‌ಗಳು ಈಗಾಗಲೇ ಬಂದಿವೆ. ಆದರಲ್ಲಿ ಕೆಲವು ಹೇಳಬೇಕಾದರೆ ಫುಡ್ ಪ್ರೊಸೆಸಿಂಗ್ ಯೂನಿಟ್ಸ್, ಆಟೋಮೊಬೈಲ್ ಸ್ಪೇರ್ ಪಾರ್ಟ್ಸ್ ಫ್ಯಾಕ್ಟರಿ, ಸ್ಮಾಲ್ ಇಂಜನೀಯರಿಂಗ್ ಯೂನಿಟ್ಸ್ ಅವೆಲ್ಲಾ ಬಂದಿವೆ. ನಾವು ಏನು ತಿಳಿದುಕೊಂಡಿದ್ದೆವು ಎಂದರೆ ಇದಕ್ಕೆಲ್ಲಾ ಇನ್‌ವೆಸ್ಟ್ ಮಾಡಲು ೧೦೦–೧೨೫ ಕೋಟಿ ರೂಪಾಯಿ ಆಗಬಹುದು ಎಂದು. ಆದರೆ ಅದು ಈಗ ೨೦೦ ಕೋಟಿ ರೂಪಾಯಿಗೂ ಮೀರಿ ಹೋಗಿದೆ. ಆದುದರಿಂದ ಮಾನ್ಯ ಸದಸ್ಯರು ನಮ್ಮ ರಾಜ್ಯದಲ್ಲಿ ಕೈಗಾರಿಕೆ ಬೆಳೆಯುವುದರ ಬಗ್ಗೆ ನಿರಾಸೆಯಾಗುವುದು ಬೇಡ.

ಶ್ರೀ ಯು. ಭೂಪತಿ.—ಹಾಗಾದರೆ ಇದರಲ್ಲಿ ಎಂಪ್ಲಾಯ್‌ಮೆಂಟ್ ಓರಿಯೆಂಟೆಡ್ ಜಾಸ್ತಿಯಾಗ ಬೇಕಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಇದರಲ್ಲಿ ಎಂಪ್ಲಾಯಮೆಂಟ್ ಓರಿಯೆಂಟೆಡ್ ಪ್ರಶ್ನೆ ಬರುವುದಿಲ್ಲ. ನಾವು ಇದನ್ನು ಬಂಡವಾಳ ದೃಷ್ಟಿಯಿಂದ ನೋಡಬೇಕು. ಹಾಗೆ ನೋಡಿದರೆ ಇದರಲ್ಲಿ ಬಂಡವಾಳ ಜಾಸ್ತಿಯಾಗಿದೆಯೇ ವಿನಾ ಕಡಿಮೆಯಾಗಿಲ್ಲ. ಆದರೆ ಇದರಲ್ಲಿ ಎಂಪ್ಲಾಯ್‌ಮೆಂಟ್ ಪೊಟೆನ್ಶಿಯಲ್ ಕಡಿಮೆ ಇರುತ್ತದೆ. ಮಾನ್ಯ ಶ್ರೀನಿವಾಸ್ ರವರು ಇದು ಆಟಾನಮಿ ಬೋರ್ಡ್ ಆಗಿ ಆಗಬೇಕು ಎಂದು ಹೇಳಿದರು. ತಮ್ಮ ಗಮನಕ್ಕೆ ತರಬೇಕಾದರೆ ಈ ಸಿಂಗಲ್ ವಿಂಡೋ ಏಜೆನ್ಸಿ ಬಗ್ಗೆ ನಮಗೆ ಈಗಾಗಲೇ ಸಾಕಷ್ಟು ಪ್ರಾಕ್ಟೀಸ್ ಆಗಿ ಬಿಟ್ಟಿದೆ. ಹಾಗೇನಾದರೂ ಮಾಡಿದರೆ ಈ ಸಿಂಗಲ್ ವಿಂಡೋ ಏಜೆನ್ಸಿಯಿಂದ ಇದು ಇಂಡಸ್ಟ್ರಿಯಲ್ ಸೆಂಟರ್‌ಗೆ ಹೋಗಬೇಕಾಗುತ್ತದೆ. ಅಲ್ಲಿ ಲೋಕಲ್‌ಮ್ಯಾನ್ಸ್ ಅಪ್ರೈಸಲ್ ಮಾಡುವುದಕ್ಕೆ ಇರುತ್ತಾನೆ. ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್‌ಗಳು ಏನಿವೆ, ಅವುಗಳನ್ನು ಅಲ್ಲಿಯ ಅಧಿಕಾರಿಗಳೇ ನೋಡಿಕೊಳ್ಳುತ್ತಾರೆಯೇ ಹೊರತು ಬೆಂಗಳೂರಿನ ಅಧಿಕಾರಿಗಳು ಕೋಲಾರಕ್ಕೆ ಹೋಗಿ ಕೆಲಸ ಮಾಡುವುದಿಲ್ಲ ಈಗ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೆಂಟರ್‌ಗಳಲ್ಲಿ ಈ ಒಂದು ಕೆಲಸ ನಡೆಯುತ್ತಿರುವ ಕಾರಣದಿಂದ ಮಾನ್ಯ ಸದಸ್ಯರ ಅನುಮಾನಕ್ಕೆ ಯಾವ ಕಾರಣವೂ ಇಲ್ಲವೆಂದು ಹೇಳುತ್ತೇನೆ.

ಇನ್ನು ಮಾನ್ಯ ಸದಸ್ಯರು ಬರ್ನಾರ್ಡ್‌ಷಾ ಮತ್ತು ಸುಂದರಿಯ ವಿಚಾರ ಹೇಳಿದರು. ಅದು ಏನೇ ಇರಲಿ. ಆದರೆ ಅವರು ಮೊದಲು ಕೊಡಬೇಕು. ಕೊಡದಿದ್ದರೆ ಏನು ಮಾಡುವುದು ? ಇಲ್ಲಿ ನನ್ನ ಸೌಂದರ್ಯ ಮತ್ತು ಅವರ ಬುದ್ಧಿ ಎರಡೂ ಒಂದು ಕಡೆ ಸೇರಬೇಕು. ಇಲ್ಲಿ ಮೊದಲು ಬೋರ್ಡ್ ಎಂಬುದು ರಚನೆ ಆಗಲಿ. ಈ ಕೆಲಸವಾದ ಮೇಲೆ ಅದರ ಫಲಿತಾಂಶ ಏನು ಬರುತ್ತದೆಂಬುದನ್ನು ಕಾದು ನೋಡೋಣ. Even otherwise it is not ruled out. This is also possible, that is also possible...

ಇನ್ನು ಮಾನ್ಯ ಕೃಷ್ಣಸ್ ಅವರು ನಮ್ಮ ಕೈಗಾರಿಕಾ ನೀತಿ ಸರಿಯಿಲ್ಲ ಎಂದು ಹೇಳಿದರು. ಮೊದಲು ಗ್ರಾಮಗಳ ಮಟ್ಟದಲ್ಲಿ ಕೈಗಾರಿಕೆಗಳ ಅಭಿವೃದ್ಧಿ ಆಗಬೇಕೆಂದು ಹೇಳಿದರು. ಇದರ ಜೊತೆಗೆ ನಮ್ಮ ಸರ್ಕಾರದ ಕೈಗಾರಿಕಾ ನೀತಿಗೂ ಮತ್ತು ಕೇಂದ್ರ ಸರ್ಕಾರದ ಕೈಗಾರಿಕಾ ನೀತಿಗೂ

ಸರಿಹೋಗುತ್ತಿಲ್ಲವೆಂದು ಸಹ ಹೇಳಿದರು. ಈ ಬಗ್ಗೆ ಯಾರದು ಸರಿ, ಯಾರದು ಸರಿಯಿಲ್ಲ ಎಂಬುದನ್ನು ಮುಂದೆ ಕಾಲವೇ ನಿರ್ಧಾರ ಮಾಡಬೇಕು. ಗೃಹ ಕೈಗಾರಿಕೆಗಳನ್ನು ಹಾಗೂ ಸಣ್ಣ ಸಣ್ಣ ಕೈಗಾರಿಕೆಗಳನ್ನು ಬೆಳೆಸಬೇಕೆಂಬುದೇ ನಮ್ಮ ಮೂಲ ಗುರಿಯಾಗಿದೆ. ವಿಲೇಜ್ ಇಂಡಸ್ಟ್ರೀಸ್ ಗಳನ್ನು ಹಾಗೂ ಕರಕುಶಲ ಕೈಗಾರಿಕೆಗಳನ್ನು ಬೆಳೆಸಬೇಕು ಮತ್ತು ಆಧುನೀಕರಣಗೊಳಿಸಬೇಕು ಎಂಬುದೇ ನಮ್ಮ ಗುರಿಯಾಗಿದೆ. ಕೈಗಾರಿಕೆಗಳನ್ನು ಕೇಂದ್ರೀಕರಣ ಮಾಡಬೇಕು ಎಂಬುದು ನಮ್ಮ ಗುರಿಯಾಗಿಲ್ಲ. ವಿಕೇಂದ್ರೀಕರಣ ಎಂಬುದು ಕೈಗಾರಿಕೆಗಳಲ್ಲಿಯೂ ಇರಬೇಕು ಮತ್ತು ಸಂಪತ್ತಿನಲ್ಲಿಯೂ ಇರಬೇಕು.

ಶ್ರೀ ಎಂ.ಎಸ್. ಕೃಷ್ಣನ್.—ಈಗ ನೀವು ವಿಲೇಜ್ ಇಂಡಸ್ಟ್ರೀಸ್ ಟ್ರೈನಿಂಗ್ ಸೆಂಟರ್ ಎಂದು ಮಾಡಿದ್ದೀರಿ. ಇಲ್ಲಿ ತಯಾರಾದಂಥ ಮಾಲುಗಳಿಗೆ ಮಾರ್ಕೆಟ್ ಇರಬೇಕು. ಅದು ಇಲ್ಲದಿದ್ದರೆ ಅವು ಬೆಳವಣಿಗೆಯಾಗುವುದಾದರೂ ಹೇಗೆ? ಗ್ರಾಮ ಕೈಗಾರಿಕೆಗಳ ಬಗ್ಗೆ ನನ್ನ ವಿರೋಧವಿಲ್ಲ. ಆದರೆ ಮಲ್ಟಿ-ನ್ಯಾಷನಲಿಸ್ಟ್‌ಗಳಿಗೆ ಪ್ರೋತ್ಸಾಹ ಕೊಡುವುದು ಸರಿಯಲ್ಲ.

ಶ್ರೀ ಜೆ.ಹೆಚ್. ಪಟೇಲ್.—ನಮ್ಮ ದೇಶದಲ್ಲಿರುವಂತಹ ಮಲ್ಟಿ-ನ್ಯಾಷನಲಿಸ್ಟ್‌ಗಳಿಗೆ ಸುಮಾರು ೨೮೦ ತರಹ ಸೋಪುಗಳನ್ನು ತಯಾರಿಸಲು ಕೊಟ್ಟಿರುವ ಅನುಮತಿ ಪತ್ರವನ್ನು ರದ್ದು ಮಾಡಿ, ಈ ಸೋಪುಗಳನ್ನು ತಯಾರಿಸಲು ವಿಲೇಜ್ ಇಂಡಸ್ಟ್ರೀಗಳಿಗೆ ಅನುಮತಿ ಕೊಡಬೇಕೆಂದು ನಾವು ಸಲಹೆ ಮಾಡಿದ್ದೆವು. ಆದರೆ ಕೇಂದ್ರಸರ್ಕಾರದವರು ಮತ್ತೆ ಅವರಿಗೇ ಲೈಸೆನ್ಸ್ ಕೊಟ್ಟಿದ್ದಾರೆ. ಏನು ಮಾಡುವುದು?

ಶ್ರೀ ಎಂ.ಎಸ್. ಕೃಷ್ಣನ್.—ಇದರಿಂದ ವಿಲೇಜ್ ಇಂಡಸ್ಟ್ರೀಗಳಿಗೆ ತೊಂದರೆ ಆಗುತ್ತದೆಂಬುದನ್ನು ತಿಳಿದೂ ತಿಳಿದೂ ಈ ರೀತಿ ಮಾಡಿದರೆ, ಇದರಲ್ಲಿ ನಿಮ್ಮ ಬುದ್ಧಿವಂತಿಕೆ ಏನಿದೆ? ಈ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳನ್ನು ನುಂಗಿ ಹಾಕುವ ಶಕ್ತಿ ನಿಮಗೆ ಇದೆಯೇ?

ಶ್ರೀ ಜೆ ಹೆಚ್. ಪಟೆ ಲ್.—ಇಂಥಾದ್ದನ್ನು ರಾಜಕೀಯವಾಗಿ ತಡೆಗಟ್ಟುವ ಶಕ್ತಿ ನಮಗಿದೆ. ಈ ದೇಶದ ಕೈಗಾರಿಕಾ ಬೆಳವಣಿಗೆಯನ್ನು ಎಲಕ್ಟ್ರಾನಿಕ್ ಸ್ಪೀಡ್‌ನಲ್ಲಿ ತೆಗೆದುಕೊಂಡು ಹೋಗಬೇಕೆಂಬುದೇ ಕೇಂದ್ರದವರ ವಿಚಾರವಾಗಿದೆ. ಆದ್ದರಿಂದ ಈ ವಿಷಯದಲ್ಲಿ ಶ್ರೀ ಕೆ.ಹೆಚ್. ಪಾಟೀಲರ ವಿಚಾರ ಅವರಿಗೆ, ನನ್ನ ವಿಚಾರ ನನಗೆ. Economics ultimately will succeed-that is your point. We are going to succeed. This country will succeed in village industries and will work for its revival. ಇವು ಕೋಕಾಕೋಲಾ ತರಹ ಆಗುವುದಿಲ್ಲ.

ಶ್ರೀ ಎನ್.ಎಮ್. ಆಡ್ಯಾಂತಯ.—ಸಾಬೂನು ತಯಾರು ಮಾಡುವುದನ್ನು ತಿಳಿದುಕೊಳ್ಳಲು ನೀವು ಬಾಂಕಾಕ್, ಹಾಕಾಂಗ್ ಮುಂತಾದ ದೇಶಗಳಿಗೆ ಹೋಗಬೇಕಾಗಿತ್ತೇ?

ಶ್ರೀ ಜೆ.ಹೆಚ್. ಪಟೇಲ್.—ಇಲ್ಲಿ ಆಧುನೀಕತೆ ಎಂಬುದೇ ಬೇರೆ ಮತ್ತು ಯಾಂತ್ರೀಕರಣ ಎಂಬುದೇ ಬೇರೆ. ಬೇರೆ ದೇಶಗಳ ಆಧುನೀಕತೆಯನ್ನು ನಮ್ಮ ದೇಶಕ್ಕೆ ತರುವ ವಿಚಾರವೇ ಬೇರೆ. ಬೇರೆ ದೇಶಗಳ ಟೆಕ್ಸ್‌ಟೈಲ್ ಇಂಡಸ್ಟ್ರೀಗಳಲ್ಲಿ ಏರ್-ಜೆಟ್‌ಲೂಮ್ಸ್ ಎಂದು ಇದೆ. ಅದು ೧೫೦ ಜನರು ಮಾಡುವ ಕೆಲಸವನ್ನು ಮಾಡುತ್ತದೆ. ಅಂಥಾದ್ದನ್ನು ಇಲ್ಲಿಗೆ ತರಲು ನೀವು ಒಪ್ಪುತ್ತೀರಾ? ಆದರೂ ಈಗಿನ ಟೆಕ್ಸ್‌ಟೈಲ್ ಇಂಡಸ್ಟ್ರಿಯನ್ನು ನಾವು ನಮ್ಮ ದೇಶದಲ್ಲಿ ಆಧುನೀಕರಣಗೊಳಿಸಬೇಕಾಗುತ್ತದೆ. ಈ ಬಗ್ಗೆ ನಾವು ೧೯೦೨ನೇ ಇಸವಿಯಲ್ಲಿ ಇದ್ದಂಥ ಪದ್ಧತಿಯನ್ನೇ ಈಗಲೂ ಮುಂದುವರೆಸಬೇಕೆಂದರೆ ಹೇಗೆ? ಆಧುನಿಕ ಟೆಕ್ನಾಲಜಿಯನ್ನು ನಮ್ಮ ದೇಶಕ್ಕೂ ಅನ್ವಯ ಮಾಡಬೇಕಾಗುತ್ತದೆ. ಅದೇ ಕಾಲಕ್ಕೆ ಕೆಲಸವಿಲ್ಲದ ನಿರುದ್ಯೋಗಿಗಳಿಗೆ ಕೆಲಸವನ್ನು ಸಹ ಒದಗಿಸಬೇಕಾಗುತ್ತದೆ. ಇದನ್ನೆಲ್ಲಾ ಮಾಡಲು ನಮಗೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

SRI M. S. KRISHNAN.—But what is happening to-day is that they are bringing most modernised and sophisticated looms and thus replacing the men through new technology....

SRI R. VENKATARAMIAH.—They have introduced computerisation in all fields.

SRI M. S. KRISHNAN.—Many textile mills have been closed because of the Central Government Policy and supported by the State Government.

SRI J. H. PATEL.—I am sorry, no, we are not supporting. That is not the subject here.

ಇದನ್ನು ಹೇಳಬೇಕೆಂದರೆ ನನಗೆ ಕನ್‌ಫ್ಯೂಷ್ ಆಗುತ್ತದೆ. Mysore Acts and Ordinances 1966 and Mysore Public Premises eviction of unauthorised Occupancy Act 1961. ಎಂದು ಒರಿಜಿನಲ್ ಆಕ್ಟ್ ಇದೆ.

ಇದರಲ್ಲಿ ಏನಾಗಿದೆ ಎಂದರೆ, ಒರಿಜಿನಲ್ ಆಕ್ಟ್ ಏನಿದೆ ಚಾಪ್ಟರ್ ೫ರಲ್ಲಿ ಮೈಸೂರು ಎಂದು ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಆಬ್ಜೆಕ್ಟ್ಸ್‌ನಲ್ಲಿ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಮೈಸೂರು ಎಂಬುದನ್ನು ತೆಗೆದು ಕರ್ನಾಟಕ ಎಂದು ಹಾಕುವುದು ಒಳ್ಳೆಯದು. Wherever the word 'Mysore' occurs it should be read as 'Karnataka'.

SRI M. S. KRISHNAN.—Then, which is the correct printing.....

SRI M. MALLIKARJUNA KHARGE.—It is not mentioned in the Objects and reasons. ನೀವು ಹೇಳಿದ ಮೇಲೆ ನಾವು ನೋಡಿದೆವು. ಅದು ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದರದ್ದೇ ರೈಟ್ ಎಂದು ತೆಗೆದುಕೊಂಡರೂ ಆದು ತಪ್ಪಾಗುತ್ತದೆ.

ಶ್ರೀ ಕೆ. ಹೆಚ್. ಪಾಟೀಲ್.—ಮೈಸೂರು, ಕರ್ನಾಟಕ ಎಂದು ಹೇಳುವುದು ಜನರಲ್ ಆಕ್ಟ್‌ನಲ್ಲೇ ಇದೆ. ಆಬ್ಜೆಕ್ಟ್ಸ್ ಕ್ಲಾಸ್ ಏನಿದೆ ಅದು ಕರೆಕ್ಟ್ ಇದೆ. ತಾವು ಹೇಳುವಾಗ 'ಕರ್ನಾಟಕ' ಎಂದು ಮಾಡುವುದಕ್ಕೆ ತಂದಿದ್ದೆವೆಂದು ಹೇಳಿದಿರಿ.

ಶ್ರೀ ಜೆ. ಹೆಚ್. ಪಟೇಲ್.—ತಾವು ಅದನ್ನು ಗಮನಕ್ಕೆ ತಂದಿರುತ್ತೀರಿ. ಬೈ ಓವರ್ ಸೈಟ್ ಮೈಸೂರು ಎಂದೇ ಬಂದಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಉಳಿದಿದೆ ಎಂದು ಹೇಳುತ್ತೀರಿ. ಅದು ಹಾಗೆ ಬಂದಿಲ್ಲ. ನೋಡಿ ಇದರಲ್ಲಿ ಇದೆ. ಇದು ಕರ್ನಾಟಕ ಗೌರ್ನಮೆಂಟ್‌ದು ಒರಿಜಿನಲ್ ಆಕ್ಟ್. It is mentioned here as 'Karnataka Industrial Area Development Board Act'.....

ಶ್ರೀ ಜೆ. ಹೆಚ್. ಪಟೇಲ್.—ಹೌದು. ಅದು ಆಲ್ಲ ಎಂದು ನಾನು ಹೇಳಲಿಲ್ಲ. ಮೈಸೂರು ಎಂದು ಇದೆ. Application of Mysore Public Premises Eviction of unauthorised Occupancy Act, 1961...ಎಂದು ಜೇಳಿ...

ಶ್ರೀ ಎಂ. ಎಸ್. ಕೃಷ್ಣನ್.—ದಯವಿಟ್ಟು ನಾನು ಕೊಟ್ಟಿದ್ದನ್ನು ನೋಡಿ.

ಶ್ರೀ ಜೆ. ಹೆಚ್. ಪಟೇಲ್.—ಇದಾ ?

ಶ್ರೀ ಎಂ. ಎಸ್. ಕೃಷ್ಣನ್.—ಗವರ್ನಮೆಂಟ್ ಆಫ್ ಕರ್ನಾಟಕ. ಅದರಲ್ಲಿ ನೋಡಿ.

ಶ್ರೀ ಜೆ. ಹೆಚ್. ಪಟೇಲ್.—ಪ್ರಿಂಟಿಂಗ್ ಮಿಸ್ಟೇಕ್ ಇರುತ್ತದೆ, ಅಷ್ಟೇ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಹೊಂ ವರ್ಕ್ ಸರಿಯಾಗಿ ಮಾಡಿಲ್ಲ. ನಿಮ್ಮ ಲಾ ಆಫೀಸರ್ಸ್ ಸರಿಯಾಗಿ ಮಾಡಿಲ್ಲ. ಲೋಕಸಭಾದವರು ಈ ಬಗ್ಗೆ ಎಷ್ಟು ಎಚ್ಚರಿಕೆಯಿಂದಿರುತ್ತಾರೆಂದರೆ, I quote from the book Practice and Procedure of Parliament, It says:

> 'Two authenticated proof copies of a Bill, except in the case of a secret bill, are received form the Ministry of Law about a week before the day on which the bill is proposed to be introduced in Lok Sabha.

The proof copy is scrutinized in the Secretariat with a *view* to ensuring that the Bill conforms to the various constitutional provisions and the rules, *viz.*

Whether the bill contains a Statement of Objects and Reasons.

Whether recommendation of the President is required either for introduction or consideration of the bill under any of the provisions of the Constitution and, if so, whether it has been received from the Minister concerned'.

ಈಗ ತಕರಾರು ಏನೆಂದರೆ, ಅವರು ಜೇಳುವುದಕ್ಕೂ ನಾವು ಹೇಳುವುದಕ್ಕೂ ವ್ಯತ್ಯಾಸ ಇದೆ. ಅವರು ಕೋಳಿಗೆ ಮೂರು ಕಾಲು ಎಂದು ಹೇಳುತ್ತಿದ್ದಾರೆ.

SRI J. H. PATEL.—Karnatka Industrial Dovelpment Act. 1966 ಸರಿ ಇದೆ. ಇಲ್ಲಿ Mysore public Premises Eviction of Unauthorised Occupants Act ನ ಅಮೆಂಡ್‌ಮೆಂಟ್ ಆಗಿದೆ. ಅಷ್ಟರಮಟ್ಟಿಗೆ ನಾನು ಒಪ್ಪುತ್ತೇನೆ. Karataka Industrial Areas Development (Amendment) Bill ಆಕ್ಟ್ಬವಲೀ ಅಮೆಂಡ್‌ಮೆಂಟ್ ಆಗುತ್ತಾ ಇರುವುದು.

SRI M. S. KRISHNAN.—What has happened is this. It doesn't contin Mysore at all - now you are thinking there is 'Mysore' ಅಮೆಂಡ್‌ಮೆಂಟ್ ಮಾಡುತ್ತಾ ಇದ್ದೀರಿ, ನಾನು ಕೊಟ್ಟಿರುವುದನ್ನು ತಾವು ನೋಡಿ.

SRI J. H. PATEL.—Mysore Premises Eviction of Unauthorised Occupants Act, 1961 ಆದು Karnataka Public Premises Eviction of Unauthorised Occupants Act, 1974 ಏನಿದೆ ಆದು ಆದಮೇಲೆ ಅಲ್ಲಿ ಕರ್ನಾಟಕ ಎಂದು ಇರಬೇಕಾಗಿತ್ತು, ಇಲ್ಲ. Actually this is only the amendment relating to the heading of Mysore Public Premises Eviction of Unauthorised Occupants Act and also constitution fo the Board. These are too technical. I concede that it should have been mentioned in the objects and reasons. I do concede. Here we are bring an amendment to the heading of Mysore Public Premises (Eviction of Unauthorised Occupants) Act, 1961.

ಶ್ರೀ ಎಂ. ಎಸ್. ಕೃಷ್ಣನ್.—ನೀವು ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ ಅಂಡ್ ರೀಸನ್ಸ್‌ನಲ್ಲಿ ಒಂದು ಅಂಶ ಹೇಳಬೇಕಾಗಿತ್ತು. ಏರಡನೆಯದು ಏನೆಂದರೆ, ನಾನು ಕೊಟ್ಟ ಆಕ್ಟನ್ನು ತಾವು ಓದಿ ನೋಡಿ. ಕ್ಲಾಸ್ ನಂ. ೨೫ ಓದಿ ಅಲ್ಲಿ ಪ್ರಿಂಟಾಗಿದೆ, ಚಾಪ್ಟರ್ ೬ರಲ್ಲಿದೆ. ಅದನ್ನು ಪೂರ್ತಿ ಓದಿ ನಿಮಗೆ ಗೊತ್ತಾಗುತ್ತದೆ, ನಾನು ಏನಾದರೂ ತಪ್ಪು ಹೇಳುತ್ತಿದ್ದೇನೆಯೇ ಎಂದು.

ಶ್ರೀ ಜೆ. ಪೆಚ್. ಪಟೇಲ್.—ಇದರಲ್ಲಿ ಮೈಸೂರು ಎಂದು ಇಲ್ಲ.

SRI M. S. KRISHNAN.—This is also printed by the Government and that is also printed by the Government, then how are we to know which one is correct. You are having one bible, I am having one bible.....

ಶ್ರೀ ಎನ್. ಎಂ. ಅಡ್ಯಂತಾಯ.—ಪ್ರಿಂಟಿಂಗ್ ಸರಿಯಿಲ್ಲ ಅಂದರೆ ಹಾಂಕಾಂಗ್‌ಗೆ ಕೊಡು ತ್ತಾರೆ.

ಶ್ರೀ ಜೆ. ಪೆಚ್. ಪಟೇಲ್.—ಕಾನ್‌ಸ್ಟಿಟ್ಯೂಷನಲ್ಲಿ ತಪ್ಪಾಗುತ್ತದೆ. ಮಾನ್ಯ ಕೃಷ್ಣನ್‌ರವರೇ ನೀವು ಹೇಳಿದ್ದನ್ನು ಗಂಭೀರವಾಗಿ ನೋಡಿದ್ದೇನೆ. ಇದು ತಾಂತ್ರಿಕವಾದಂಥಾದ್ದು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕೊಟ್ಟಿರುವ ಆಕ್ಟನ್ನು ನೋಡಿ, ಇನ್ನೊಂದು ಸಾರಿ ಅಮೆಂಡ್‌ಮೆಂಟ್ ತೆಗೆದುಕೊಂಡು ಬರುವುದಾದರೆ ತೆಗೆದುಕೊಂಡು ಬನ್ನಿ.

ಶ್ರೀ ಜೆ. ಹೆಚ್. ಪಟೇಲ್.—ಇದಕ್ಕೆ ಏನೂ ಹಾನಿಯಾಗುವುದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಆಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ವಿಷಯಗಳನ್ನು ಹೇಳಿದ್ದೇನೆ. ಮತ್ತೆ ಕೆಲವು ವಿಷಯಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆದರೆ ಇನ್ನೂ ಹೆಚ್ಚು ವಿಷಯಗಳನ್ನು ಬೇರೆ ಸಮಯದಲ್ಲಿ ಪ್ರಸ್ತಾಪ ಮಾಡುವುದಕ್ಕಾಗುತ್ತದೆ. ಆದುದರಿಂದ ಈ ವಿಧೇಯಕವನ್ನು ಈ ಸದನ ಒಪ್ಪಿಕೊಳ್ಳುತ್ತದೆ ಎಂದು ಭಾವಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ. ''೧೯೮೭ನೇ ಇಸವಿಯ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

೨ ರಿಂದ ೬ನೇ ಖಂಡಗಳು:

ಅಧ್ಯಕ್ಷರು.—''ಖಂಡ ೨ ರಿಂದ ೬ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ ೨ರಿಂದ ೬ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ.—

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ''ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವನ್ನು ಅಂಗೀಕರಿಸಲಾಯಿತು

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ಇವುಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ ೧೯೮೭ನೇ ಇಸವಿಯ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಮಂಡಿಸುತ್ತೇನೆ''.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.—

''೧೯೮೭ನೇ ಇಸವಿಯ ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು

ಖಾಸಗಿ ಸದಸ್ಯರುಗಳ ನಿರ್ಣಯಗಳು

ಪಾನನಿರೋಧದ ಬಗ್ಗೆ ಶಿಫಾರಸ್ಸು ಮಾಡಲು ಒಂದು ಉಚ್ಚ ಸಮಿತಿಯ ನೇಮಕ

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ಈ ಸಭೆಯಲ್ಲಿ ಬರುವ ವಿಷಯಗಳ ಬಗ್ಗೆ ಚಿಂತನೆ ಮಾಡಿ, ಬೆಳಕು ಚೆಲ್ಲತಕ್ಕಂಥಾದ್ದು ಒಳ್ಳೆಯದು. ಇವತ್ತು ಅನುಭವಿ ಸದಸ್ಯರಾದಂಥ ಮಾನ್ಯ ಶ್ರೀನಿವಾಸರೆಡ್ಡಿಯವರು ಮದ್ಯಪಾನದ ಬಗ್ಗೆ ಏನೊಂದು ನಿರ್ಣಯವನ್ನು ತಂದಿದ್ದಾರೆ, ಇದು